# ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ : ಕೊಪ್ಪಳ ವಿಭಾಗ; ಕೊಪ್ಪಳ

ಸಂ:ಕಕರಸಾ:ಕೊವಿ:ಸಂ:ವಾಣಿಜ್ಯ: 3223 :2022 ದಿನಾಂಕ:11.03.2022.

## -:ಇ-ಟೆಂಡರ್ ಪ್ರಕಟಣೆ ಸಂಖ್ಯೆ: 01 /2022:-

1.ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ-150/17 ದಿನಾಂಕ:-08.08.2017.
2.ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ-156/18 ದಿನಾಂಕ:-24.08.2018.
3.ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ-170/20 ದಿನಾಂಕ:-14.12.2020.
4.ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ-172/21 ದಿನಾಂಕ:-12.03.2021.
5.ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ-706/21 ದಿನಾಂಕ:-30.10.2021.
5.ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ-713/21 ದಿನಾಂಕ:-21.12.2021.

* * *

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೊಪ್ಪಳ ವಿಭಾಗದ ಈ ಕೆಳಗೆ ನಮೂದಿಸಿದ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ವಿವಿಧ ವಾಣಿಜ್ಯ ವ್ಯವಹಾರವನ್ನು ನಡೆಸಲು ಖಾಯಂ ಮಳಿಗೆಗೆ ಆಸಕ್ತಿ ಹೊಂದಿರುವವರಿಗೆ ಖಾಯಂ ಮಳಿಗೆಗಳಿಗೆ 05 (ಐದು) ವರ್ಷದ ಅವಧಿಗೆ ಹಾಗೂ ತೆರೆದ ಸ್ಥಳದ ಮಳಿಗೆಗಳಿಗೆ 03 (ಮೂರು) ವರ್ಷದ ಅವಧಿಗೆ ಪರವಾನಿಗೆ ಮೇಲೆ ನೀಡಲು ಉದ್ದೇಶಿಸಿದ್ದು, ಈ ಮೂಲಕ ಟೆಂಡರ ಕರೆಯಲಾಗಿದೆ. ಕ.ಕ.ರ.ಸಾ.ಸಂಸ್ಥೆಯ ನಿಯಮಾವಳಿಗಳನ್ವಯ ನಿಯಮಗಳನ್ನು ಪಾಲಿಸಿ ಅತೀ ಹೆಚ್ಚಿನ ಮೊತ್ತವನ್ನು ಪ್ರತಿ ತಿಂಗಳ ಪರವಾನಿಗೆ ಶುಲ್ಕ ನೀಡುವವರನ್ನು ಆಯ್ಕೆ ಮಾಡಲಾಗುವುದು. ಯಶಸ್ವಿ ಟೆಂಡರದಾರರು ಎರಡನೇಯ ವರ್ಷದಿಂದ ಪ್ರತಿ ವರ್ಷ ಶೇಕಡಾ 10% ರಷ್ಟು ಹೆಚ್ಚಿನ ಪರವಾನಗಿ ಶುಲ್ಕವನ್ನು ಪರವಾನಗಿ ಅವಧಿ ಮುಗಿಯುವವರೆಗೆ ನೀಡಬೇಕಾಗಿರುತ್ತದೆ.

**ಸಂಸ್ಥೆಯ ಸಾಮಾನ್ಯ ಸ್ಥಾಯೀ ಆದೇಶ ಸಂಖ್ಯೆ 150/17, 156/18, 170/20, 172/2021, 706/2021 & 713/2021 ರನ್ವಯ ಈ ಕೆಳಕಂಡ ವಾಣಿಜ್ಯ ಮಳಗಳು ಇ-ಟೆಂಡರ ಒಳಪಡುತ್ತವೆ ಹಾಗೂ ಅದರ ವಿವರ:**

| ಕ್ರಮ. ಸಂ. | ಬಸ್ ನಿಲ್ದಾಣ | ವಾಣಿಜ್ಯ ಮಳಿಗೆ ಮಾದರಿ | ಮಳಿಗೆ ಸಂಖ್ಯೆ | ಮಳಿಗೆಯ ವಿಸ್ತೀರ್ಣ (ಚ.ಅ.ಗಳಲ್ಲಿ) | ಮಾಸಿಕ ಶುಲ್ಕ ರೂ. | ಮೀಸಲಾತಿ | ಇ-ಪ್ರೋಕ್ಯರ್‌ಮೆಂಟ್ ಮೂಲಕ ಇ.ಎಂ.ಡಿ ಮೊತ್ತ ರೂ. |
|---|---|---|---|---|---|---|---|
| 01 | 02 | 03 | 04 | 05 | 06 | 07 | 08 |
| 01 | ಕೊಪ್ಪಳ | ಉಪಹಾರ ಗೃಹ | 01 | 1603.82 | 86515.00 | ಸಾಮಾನ್ಯ ವರ್ಗ | 259454.00 |
| 02 | ಕೊಪ್ಪಳ | ಸಾಮಾನ್ಯ ಮಳಿಗೆ | 02 | 162.64 | 88110.00 | ಸಾಮಾನ್ಯ ವರ್ಗ | 264330.00 |
| 03 | ಕೊಪ್ಪಳ | ಸಾಮಾನ್ಯ ಮಳಿಗೆ (ದಿ:02.06.22 ರಂದು ಖಾಲಿ ಆಗಲಿದೆ) | 08 | 65.12 | 38623.00 | ಸಾಮಾನ್ಯ ವರ್ಗ | 115869.00 |
| 04 | ಕೊಪ್ಪಳ | ಸಾಮಾನ್ಯ ಮಳಿಗೆ | 09 | 65.12 | 18302.00 | ಸಾಮಾನ್ಯ ವರ್ಗ | 54906.00 |
| 05 | ಕೊಪ್ಪಳ | ಸಾಮಾನ್ಯ ಮಳಿಗೆ | 11 | 168.56 | 11274.00 | ಸಾಮಾನ್ಯ ವರ್ಗ | 33822.00 |
| 06 | ಕೊಪ್ಪಳ | ದ್ವಿ ಚಕ್ರ ವಾಹನಗಳ ನಿಲುಗಡೆ | 02 | 1500.00 | 29096.00 | ಸಾಮಾನ್ಯ ವರ್ಗ | 87288.00 |
| 07 | ಯಲಬುರ್ಗಾ | ದ್ವಿ ಚಕ್ರ ವಾಹನಗಳ ನಿಲುಗಡೆ | 01 | 290.52 | 2000.00 | ಸಾಮಾನ್ಯ ವರ್ಗ | 6000.00 |
| 08 | ಯಲಬುರ್ಗಾ | ಸಾಮಾನ್ಯ ಮಳಿಗೆ (ತೇ.ಸ್ಥ) | - | 4*4 | 3643.00 | ಸಾಮಾನ್ಯ ವರ್ಗ | 10929.00 |
| 09 | ಕುಕನೂರು | ಉಪಹಾರ ಗೃಹ | - | 60.00 | 21690.00 | ಸಾಮಾನ್ಯ ವರ್ಗ | 65070.00 |
| 10 | ಗಂಗಾವತಿ | ಉಪಹಾರ ಗೃಹ (ದಿ:29/04/22 ರಂದು ಖಾಲಿ ಆಗಲಿದೆ) | - | 1029.68 | 78000.00 | ಸಾಮಾನ್ಯ ವರ್ಗ | 234000.00 |
| 11 | ಗಂಗಾವತಿ | ಸಾಮಾನ್ಯ ಹಾಲ್ | 01 | 517.42 | 4581.00 | ಸಾಮಾನ್ಯ ವರ್ಗ | 13743.00 |
| 12 | ಗಂಗಾವತಿ | ಸಾಮಾನ್ಯ ಹಾಲ್ | 02 | 929.25 | 7465.00 | ಸಾಮಾನ್ಯ ವರ್ಗ | 22395.00 |
| 13 | ಗಂಗಾವತಿ | ಸಾಮಾನ್ಯ ಹಾಲ್ | 04 | 517.42 | 4086.00 | ಸಾಮಾನ್ಯ ವರ್ಗ | 12258.00 |
| 14 | ಗಂಗಾವತಿ | ಸಾಮಾನ್ಯ ಮಳಿಗೆ | 02 | 145.31 | 14641.00 | ಸಾಮಾನ್ಯ ವರ್ಗ | 43923.00 |
| 15 | ಗಂಗಾವತಿ | ಸಾಮಾನ್ಯ ಮಳಿಗೆ | 13 | 145.31 | 6051.00 | ಸಾಮಾನ್ಯ ವರ್ಗ | 18153.00 |
| 16 | ಗಂಗಾವತಿ | ಸಾಮಾನ್ಯ ಮಳಿಗೆ | 14 | 145.31 | 13163.00 | ಸಾಮಾನ್ಯ ವರ್ಗ | 39489.00 |
| 17 | ಗಂಗಾವತಿ | ಸಾಮಾನ್ಯ ಮಳಿಗೆ | 20 | 145.31 | 19766.00 | ಸಾಮಾನ್ಯ ವರ್ಗ | 59298.00 |
| 18 | ಗಂಗಾವತಿ | ಸಾಮಾನ್ಯ ಮಳಿಗೆ | 21 | 233.46 | 18150.00 | ಸಾಮಾನ್ಯ ವರ್ಗ | 54450.00 |
| 19 | ಹಿರೇ ಸಿಂದೋಗಿ | ಸಾಮಾನ್ಯ ಮಳಿಗೆ | 01 | 59.40 | 1610.00 | ಸಾಮಾನ್ಯ ವರ್ಗ | 4830.00 |

| | | | | | | | |
|---|---|---|---|---|---|---|---|
| 20 | ಇರಕಲ್ಲಗಡ | ಉಪಹಾರ ಗೃಹ | – | 46.08 | 10080.00 | ಸಾಮಾನ್ಯ ವರ್ಗ | 30240.00 |
| 21 | ಇರಕಲ್ಲಗಡ | ಸಾಮಾನ್ಯ ಮಳಿಗೆ | 03 | 14.65 | 3205.00 | ಸಾಮಾನ್ಯ ವರ್ಗ | 9615.00 |
| 22 | ಮುನಿರಾಬಾದ | ಉಪಹಾರ ಗೃಹ | – | 717.00 | 17467.00 | ಸಾಮಾನ್ಯ ವರ್ಗ | 52401.00 |
| 23 | ಮುನಿರಾಬಾದ | ಸಾಮಾನ್ಯ ಮಳಿಗೆ | 01 | 116.00 | 4399.00 | ಸಾಮಾನ್ಯ ವರ್ಗ | 13197.00 |
| 24 | ಮುನಿರಾಬಾದ | ಸಾಮಾನ್ಯ ಮಳಿಗೆ | 02 | 116.00 | 4099.00 | ಸಾಮಾನ್ಯ ವರ್ಗ | 12297.00 |
| 25 | ಹೊಸಲಿಂಗಾಪೂರ | ಸಾಮಾನ್ಯ ಮಳಿಗೆ | 02 | 121.20 | 4343.00 | ಸಾಮಾನ್ಯ ವರ್ಗ | 13029.00 |
| 26 | ಹೊಸಲಿಂಗಾಪೂರ | ಸಾಮಾನ್ಯ ಮಳಿಗೆ | 03 | 121.20 | 1464.00 | ಸಾಮಾನ್ಯ ವರ್ಗ | 4392.00 |
| 27 | ತಾವರಗೇರಾ | ಸಾಮಾನ್ಯ ಮಳಿಗೆ | 02 | 120.00 | 9065.00 | ಸಾಮಾನ್ಯ ವರ್ಗ | 27195.00 |
| 28 | ಹಿಟ್ನಾಳ | ಸಾಮಾನ್ಯ ಮಳಿಗೆ | 01 | 9.10 | 1945.00 | ಸಾಮಾನ್ಯ ವರ್ಗ | 5835.00 |
| 29 | ಹಿಟ್ನಾಳ | ಸಾಮಾನ್ಯ ಮಳಿಗೆ | 02 | 9.10 | 1945.00 | ಸಾಮಾನ್ಯ ವರ್ಗ | 5835.00 |
| 30 | ಅಳವಂಡಿ | ಉಪಹಾರ ಗೃಹ | – | ಈಗಿರುವಂತೆ | 2001.00 | ಸಾಮಾನ್ಯ ವರ್ಗ | 6003.00 |
| 31 | ಅಳವಂಡಿ | ಸಾಮಾನ್ಯ ಮಳಿಗೆ (ತೇ.ಸ್ಥ) | 02 | 10*10 | 1349.00 | ಸಾಮಾನ್ಯ ವರ್ಗ | 4047.00 |
| 32 | ಅಳವಂಡಿ | ಸಾಮಾನ್ಯ ಮಳಿಗೆ (ತೇ.ಸ್ಥ) | 07 | 8*8 | 850.00 | ಸಾಮಾನ್ಯ ವರ್ಗ | 2550.00 |
| 33 | ಕವಲೂರ | ಉಪಹಾರ ಗೃಹ | – | 290.00 | 5983.00 | ಸಾಮಾನ್ಯ ವರ್ಗ | 17949.00 |
| 34 | ಕವಲೂರ | ಸಾಮಾನ್ಯ ಮಳಿಗೆ | 01 | 52.00 | 1080.00 | ಸಾಮಾನ್ಯ ವರ್ಗ | 3240.00 |
| 35 | ಕಾತರಕಿ ಗೂಡ್ಲಾನೂರ | ಸಾಮಾನ್ಯ ಮಳಿಗೆ | 01 | 94.69 | 1539.00 | ಸಾಮಾನ್ಯ ವರ್ಗ | 4617.00 |
| 36 | ಮಸಬಹಂಚಿನಾಳ | ಉಪಹಾರ ಗೃಹ | – | 40.80 | 8721.00 | ಸಾಮಾನ್ಯ ವರ್ಗ | 26163.00 |
| 37 | ಮಸಬಹಂಚಿನಾಳ | ಸಾಮಾನ್ಯ ಮಳಿಗೆ | 01 | 10.73 | 1320.00 | ಸಾಮಾನ್ಯ ವರ್ಗ | 3690.00 |
| 38 | ಹನುಮನಾಳ | ಉಪಹಾರ ಗೃಹ | – | 789.48 | 4860.00 | ಸಾಮಾನ್ಯ ವರ್ಗ | 14580.00 |
| 39 | ಗುನ್ನಾಳ | ಸಾಮಾನ್ಯ ಮಳಿಗೆ | 01 | 12.24 | 2601.00 | ಸಾಮಾನ್ಯ ವರ್ಗ | 7803.00 |
| 40 | ಗುನ್ನಾಳ | ಉಪಹಾರ ಗೃಹ | – | 46.96 | 9979.00 | ಸಾಮಾನ್ಯ ವರ್ಗ | 29937.00 |
| 41 | ಸಿದ್ದಾಪೂರ | ಉಪಹಾರ ಗೃಹ | – | 505.61 | 3328.00 | ಸಾಮಾನ್ಯ ವರ್ಗ | 9984.00 |
| 42 | ತಳಕಲ್ಲ | ಉಪಹಾರ ಗೃಹ | – | 55.25 | 15009.00 | ಸಾಮಾನ್ಯ ವರ್ಗ | 45027.00 |
| 43 | ತಳಕಲ್ಲ | ಸಾಮಾನ್ಯ ಮಳಿಗೆ | 01 | 13.60 | 4064.00 | ಸಾಮಾನ್ಯ ವರ್ಗ | 12192.00 |
| 44 | ತಳಕಲ್ಲ | ಸಾಮಾನ್ಯ ಮಳಿಗೆ | 02 | 13.60 | 3695.00 | ಸಾಮಾನ್ಯ ವರ್ಗ | 11085.00 |
| 45 | ತಳಕಲ್ಲ | ಸಾಮಾನ್ಯ ಮಳಿಗೆ | 03 | 13.60 | 3695.00 | ಸಾಮಾನ್ಯ ವರ್ಗ | 11085.00 |
| 46 | ತಳಕಲ್ಲ | ಸಾಮಾನ್ಯ ಮಳಿಗೆ | 04 | 18.54 | 5036.00 | ಸಾಮಾನ್ಯ ವರ್ಗ | 15108.00 |
| 47 | ತಾಳಕೇರಿ | ಉಪಹಾರ ಗೃಹ | – | 40.24 | 8551.00 | ಸಾಮಾನ್ಯ ವರ್ಗ | 25653.00 |
| 48 | ತಾಳಕೇರಿ | ಸಾಮಾನ್ಯ ಮಳಿಗೆ | 01 | 10.47 | 2225.00 | ಸಾಮಾನ್ಯ ವರ್ಗ | 6675.00 |

ಮೇಲಿನ ಮಳಿಗೆಗಳಲ್ಲಿ ಕಾನೂನಿನ ಪ್ರಕಾರ ನಿಷೇಧಿಸಲ್ಪಟ್ಟ ಹಾಗೂ ಸಂಸ್ಥೆಯ ಹಿತಾಸಕ್ತಿಗೆ ಧಕ್ಕೆಯುಂಟು ಮಾಡುವ ವ್ಯವಹಾರಗಳನ್ನು ಹೊರತುಪಡಿಸಿ ತಮ್ಮ ಬೇಡಿಕೆಗಳನ್ನು ಸೂಚಿಸಿ ಇ-ಟೆಂಡರ್ ನಲ್ಲಿ ಭಾಗವಹಿಸಬಹುದು.ನಿಷೇಧಿಸಲ್ಪಟ್ಟ ವ್ಯವಹಾರಗಳ ವಿವರ : ಟೂರಿಸ್ಟ್ ಟ್ರಾವೆಲ್ಸ್ ಏಜೆನ್ಸಿ, ಮಧ್ಯಪಾನ ಅಂಗಡಿ, ಮಾಂಸದ ಮಾರಾಟ ಮಳಿಗೆ, ಮಾದಕ ವಸ್ತುಗಳ ವ್ಯಾಪಾರ, ಪಟಾಕಿ ಮತ್ತು ಸ್ಫೋಟಕ ವಸ್ತುಗಳ ಮಾರಾಟ, ವಾಯು ಮಾಲಿನ್ಯ ಉಂಟು ಮಾಡುವ ವಸ್ತುಗಳ ವ್ಯಾಪಾರ ಮತ್ತು ಇ-ಟೆಂಡರ್‌ಕಮಿಟಿಯ ನಿರ್ಣಯದಂತೆ ನಿಷೇಧಿಸಲ್ಪಟ್ಟ ವಸ್ತುಗಳ ಮಾರಾಟ.

- **ವಿಶೇಷ ಸೂಚನೆ** : ನೂತನ ಸುತ್ತೋಲೆ ಸಂ: 713 ದಿನಾಂಕ:21.12.2021 ರನ್ವಯ ಇ-ಟೆಂಡರ್ ಭಾಗವಹಿಸಲು ಇಚ್ಛಿಸುವ ಬಿಡ್‌ದಾರರು ಸಂಸ್ಥೆಯು ನಿಗಧಿಪಡಿಸಿರುವ ಇ.ಎಂ.ಡಿ ಮೊತ್ತವನ್ನು ಹಾಗೂ ಅವಶ್ಯಕ ಎಲ್ಲಾ ದಾಖಲಾತಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಲು ತಿಳಿಸಲಾಗಿದ್ದು, ಈ ಸಂಬಂಧ ಯಾವುದೇ ದಾಖಲೆಗಳನ್ನಾಗಲಿ ಅಥವಾ ಶುಲ್ಕಗಳಿಗೆ ಡಿ.ಡಿ./ಆರ್.ಟಿ.ಜಿ.ಎಸ್./ನಗದು ರೂಪದಲ್ಲಿ ಭರಿಸಿಕೊಳ್ಳುವುದಿಲ್ಲ. **ಒಂದು ವೇಳೆ ಬಿಡ್‌ದಾರರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಸಂಸ್ಥೆಯು ನಿಗಧಿಪಡಿಸಿರುವ ಶುಲ್ಕಗಳನ್ನು ಆನ್‌ಲೈನ್ ಭರಿಸದೇ ಇದ್ದಲ್ಲಿ ಅಥವಾ ನಿಗಧಿಪಡಿಸಿರುವ ದಾಖಲೆಗಳನ್ನು ಸಲ್ಲಿಸದೇ ಇದ್ದಲ್ಲಿ ಅವರ ಬೇಡಿಕೆಯನ್ನು ತಿರಸ್ಕರಿಸುವ ಅಧಿಕಾರವನ್ನು ಸಂಸ್ಥೆಯು ಹೊಂದಿರುತ್ತದೆ.**
- **ವಿಶೇಷ ಸೂಚನೆ: ಮೇಲಿನ ಮಳಿಗೆಗಳಿಗೆ ಸಂಬಂಧಿಸಿದಂತೆ ಬಿಡ್ ಸಲ್ಲಿಸಲು ಬಯಸುವ ಬಿಡ್‌ದಾರರು ಪ್ರಕಟಣೆಯನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಂಡ ನಂತರವೇ ಟೆಂಡರ್‌ನಲ್ಲಿ ಭಾಗವಹಿಸಲು ತಿಳಸಲಾಗಿದೆ. ಈ ಕೆಳಗೆ ನಮೂದಿಸಲಾದ ದಿನಾಂಕ ಮತ್ತು ಸಮಯದೊಳಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹಾಗೂ ದಿನಾಂಕ:31.03.2022 ರಂದು ಬೆಳಗ್ಗೆ 11.00 ಗಂಟೆಗೆ ಇ-ಟೆಂಡರ್‌ನ್ನು**

**ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಇ-ವೇದಿಕೆಗೆ ಅಥವಾ ವಿಭಾಗೀಯ ಸಂಚಾಲನಾಧಿಕಾರಿ, ಕೊಪ್ಪಳ ರವರ ದೂರವಾಣಿ ಸಂ: 7760992402 ಗೆ ಸಂಪರ್ಕಿಸಬಹುದಾಗಿದೆ.**

| .ಕ್ರಮ ಸಂ | ವಿವರ | ದಿನಾಂಕ / ಸಮಯದ ಮಾಹಿತಿ |
|---|---|---|
| 1 | ಇ-ಟೆಂಡರ್ ದಸ್ತಾವೇಜುಗಳನ್ನು ಡೌನ್ ಲೋಡ್ ಮಾಡಿಕೊಳ್ಳಲು ಕೊನೆಯ ದಿನಾಂಕ. | ದಿನಾಂಕ:02-04-2022 ರಂದು ಸಮಯ 17-00 ಗಂಟೆಯವರೆಗೆ. |
| 2 | ಇ-ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ. | ದಿನಾಂಕ:02-04-2022 ರಂದು ಸಮಯ 17-00 ಗಂಟೆಯವರೆಗೆ. |
| 3 | ಇ-ಟೆಂಡರ್‌ನ್ನು ತೆರೆಯುವ ದಿನಾಂಕ. | ದಿನಾಂಕ:04-04-2022 ರಂದು ಸಮಯ 11:00 ಗಂಟೆಯ ನಂತರ. |

- ಇ-ಟೆಂಡರ್‌ನಲ್ಲಿ ಭಾಗವಹಿಸುವ ಅರ್ಜಿದಾರರು/ಬಿಡ್‌ದಾರರು/ಗುತ್ತಿಗೆದಾರರು ಆನ್‌ಲೈನ್‌ನಲ್ಲಿ ಸಲ್ಲಿಸಿರುವ ಇ.ಎಂ.ಡಿ. ಶುಲ್ಕದ ದಾಖಲೆ ಹಾಗೂ ಆಧಾರ ಕಾರ್ಡ್/ಪಾನ್ ಕಾರ್ಡ್/ಸಂಸ್ಥೆಯ ಷರತ್ತು ಮತ್ತು ನಿಬಂಧನೆಗಳ ಕುರಿತು ತಿಳಿದುಕೊಂಡಿರುವ ಸ್ವಯಂ ದೃಢೀಕರಣ ಪತ್ರ/ಕಪ್ಪು ಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ದೃಢೀಕರಣ ಪತ್ರ/ಮೀಸಲಾತಿಯ ಆಧಾರದ ಕುರಿತು ಸ್ವಯಂ ದೃಢೀಕರಣ ಪತ್ರ/ಕಾರ್ಮಿಕ ಅಧಿಕಾರಿಗಳ ಲೈಸನ್ಸ್ ಪ್ರತಿ/ಜಿ.ಎಸ್.ಟಿ ಪ್ರತಿ ಹಾಗೂ ಇತರೆ ದಾಖಲೆಗಳನ್ನು ಅಪ್‌ಲೋಡ್ ಮಾಡಿರುವಂತೆಯೇ, ಪರವಾನಿಗೆದಾರರಾಗಿ ಆಯ್ಕೆಯಾಗುವ ಬಿಡ್‌ದಾರರು ಸಂಸ್ಥೆಗೆ ದಾಖಲಾತಿಗಳನ್ನು ಸಲ್ಲಿಸಲು ತಿಳಿಸಿದಾಗ ಸಲ್ಲಿಸತಕ್ಕದ್ದು.

ಒಂದು ವೇಳೆ ತಾಂತ್ರಿಕ ದೋಷದಿಂದ ಅಂತರ್ ಜಾಲದಲ್ಲಿ ತೊಂದರೆಯಾದಲ್ಲಿ ಟೆಂಡರ್ ಸಮಯವನ್ನು ಮುಂದೂಡುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ಕ.ರ.ಸಾ..ನಿಗಮ ಕೊಪ್ಪಳ ವಿಭಾಗ, ಕೊಪ್ಪಳ ರವರಿಗೆ ಸಂಪರ್ಕಿಸಲು ಕೋರಲಾಗಿದ್ದು, ಸಂಪರ್ಕಿಸಬಹುದಾದ ದೂರವಾಣಿ ಸಂ: 77609-92402 ವಿಭಾಗೀಯ ಸಂಚಾರ ಅಧಿಕಾರಿಗಳು ಅಥವಾ ಸಂಚಾರ ಶಾಖೆಯ ವಿಷಯ ನಿರ್ವಾಹಕರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

1) ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ ರವರು **ಇ-ಟೆಂಡರ್**‌ನಲ್ಲಿ ಬಿಡ್ಡುದಾರರುಗಳು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸುವ ದರಗಳನ್ನು ಮಾತ್ರ ಪರಿಗಣಿಸುವಂತೆ ಹಾಗೂ **ಇ-ಟೆಂಡರ್** ದಾಖಲಾತಿಗಳೊಂದಿಗೆ ಇನ್ಯಾವುದೇ ಅನುಬಂಧಗಳು ನಮೂನೆಗಳು ಮತ್ತು ಇತರೆ ಮಾಧ್ಯಮದ ಮೂಲಕ ಸಲ್ಲಿಸುವ ದರಗಳನ್ನು ಪರಿಗಣಿಸತಕ್ಕದ್ದಲ್ಲವೆಂದು ತಿಳಿಸಿರುತ್ತಾರೆ. ಅದರಂತೆ, ಸಾಮಾನ್ಯ ಸ್ಥಾಯೀ ಆದೇಶ ಸಂ: 170/20-21 ದಿನಾಂಕ: 14-12-2020 ರಲ್ಲಿನಂತೆ ಕೆಳಕಂಡ ಅಂಶಗಳನ್ನು **ಇ-ಟೆಂಡರ್**‌ನಲ್ಲಿ ಭಾಗವಹಿಸುವ ಎಲ್ಲಾ ಬಿಡ್‌ದಾರರಿಗೆ/ಅರ್ಜಿದಾರರಿಗೆ/ಸಂಘ ಸಂಸ್ಥೆಗಳ ಗಮನಕ್ಕೆ ತರಲಾಗಿದೆ.
2) ವಿಭಾಗದ ವ್ಯಾಪ್ತಿಯಲ್ಲಿ ಆಹ್ವಾನಿಸಲಾಗುವ **ಇ-ಟೆಂಡರ್**‌ಗಳಲ್ಲಿ ಬಿಡ್ಡುದಾರರು ಇ-ಪೋರ್ಟಲ್‌ನಲ್ಲಿ ನಮೂದಿಸುವ ದರಗಳನ್ನು ಮಾತ್ರ ಪರಿಗಣಿಸಲಾಗುವುದು.
3) **ಇ-ಟೆಂಡರ್** ದಾಖಲಾತಿಗಳೊಂದಿಗಿನ ಇನ್ಯಾವುದೇ ಅನುಬಂಧಗಳು, ನಮೂನೆಗಳು ಮತ್ತು ಇತರೆ ಮಾಧ್ಯಮದ ಮೂಲಕ ಆರ್ಥಿಕ ಬಿಡ್ಡು ಕುರಿತು ಬಿಡ್ಡುದಾರರು ಸಲ್ಲಿಸುವ ದರಗಳನ್ನು ಪರಿಗಣಿಸುವುದಿಲ್ಲ.
4) ಸಂಸ್ಥೆಯ ವತಿಯಿಂದ ಇ-ಟೆಂಡರ್‌ನಲ್ಲಿ ಅಪ್‌ಲೋಡ್ ಮಾಡುವ ಷರತ್ತು ಮತ್ತು ನಿಬಂಧನೆಗಳಲ್ಲಿ ಬಿಡ್ಡುದಾರರು ನಮೂದಿಸಬೇಕಾದ ದರಗಳು/ಮೊತ್ತದ ಬಗ್ಗೆ ಕೆಳಗಿನಂತೆ ಉದಾರಣೆಯಲ್ಲಿ ವಿವರಿಸಲಾಗಿದೆ.

   **ಮಾಸಿಕ ಶುಲ್ಕದ ಉದಾಹರಣೆ** : ಮೇಲಿನಂತೆ ಕೊಷ್ಠಕದಲ್ಲಿ ಸೂಚಿಸಿದಂತೆ ಕೊಪ್ಪಳ ಕೇಂದ್ರ ಬಸ್ ನಿಲ್ದಾಣದಲ್ಲಿನ ಸಾಮಾನ್ಯ ಮಳಿಗೆ ಸಂಖ್ಯೆ 02 ರ ಮಾಸಿಕ ಪರವಾನಗಿ ಶುಲ್ಕ **₹88110/-**ಗಳನ್ನು ನಿಗದಿಪಡಿಸಲಾಗಿರುತ್ತದೆ. ಬಿಡ್ ಸಲ್ಲಿಸುವ ಅರ್ಜಿದಾರರು ಸಂಸ್ಥೆಯು ನಿಗಧಿಪಡಿಸಿರುವ ಶುಲ್ಕಕ್ಕಿಂತ ಹೆಚ್ಚಿನ ಬಿಡ್ ಮೊತ್ತವನ್ನು ಸಲ್ಲಿಸಿದ ಬಿಡ್‌ದಾರರನ್ನು ಸಂಸ್ಥೆಯ ನಿಯಮಗಳನ್ವಯ ಆಯ್ಕೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

   GST **ಶುಲ್ಕದ ಉದಾಹರಣೆ** : ಹಾಗೆಯೇ **ಇ-ಟೆಂಡರ್**‌ನಲ್ಲಿ ಸಲ್ಲಿಸುವ ಮೊತ್ತವು ಬಿಡ್‌ದಾರರ ಬೇಡಿಕೆ ಮೊತ್ತವಾಗಿದ್ದು, ಇದು ಜಿ.ಎಸ್.ಟಿ., ಹೊರತಾಗಿರುತ್ತದೆ. ಹೀಗಾಗಿ ಬಿಡ್‌ದಾರರು ಅವರು ಆಯ್ಕೆಯಾಗುವ ಮೊತ್ತದೊಂದಿಗೆ ಅನ್ವಯಿಸುವ ಜಿ.ಎಸ್.ಟಿ. ಯನ್ನು ಸೇರಿಸಿ ಸಂಸ್ಥೆಗೆ ಪಾವತಿಸಬೇಕಾಗಿರುತ್ತದೆ ಉದಾ: ಬಿಡ್‌ದಾರರು ಮಾಸಿಕ ಪರವಾನಗಿ ಶುಲ್ಕ **₹88111/-** ಗಳಂತೆ ಆಯ್ಕೆಯಾಗಿದ್ದಲ್ಲಿ ಇದಕ್ಕೆ 18% ಜಿ.ಎಸ್.ಟಿ. **₹15860/-**ಸೇರಿಸಿ ಒಟ್ಟು**₹103971/-** ಗಳನ್ನು ಸಂಸ್ಥೆಗೆ ಪಾವತಿಸಬೇಕಾಗಿರುತ್ತದೆ (ಮಾಸಿಕ ಪರವಾನಗಿ ಶುಲ್ಕವು ಪ್ರತಿ ವರ್ಷ ಶೇಕಡ 10% ರಷ್ಟು ಹೆಚ್ಚಳಗೊಳಿಸಲಾಗುವುದು. ಹೀಗಾಗಿ ಹೆಚ್ಚುವರಿ ಶುಲ್ಕದೊಂದಿಗೆ ಜಿ.ಎಸ್.ಟಿಯನ್ನು ಸೇರಿಸಿ ಪಾವತಿಸಬೇಕಾಗಿರುತ್ತದೆ).
5) ಒಂದು ವೇಳೆ ತಾಂತ್ರಿಕ ದೋಷದಿಂದ ನಿಗಧಿತ ದಿನಾಂಕದಂದು ನಡೆಸದಿದ್ದಲ್ಲಿ ಇ-ಟೆಂಡರ್‌ಸಮಯವನ್ನು ಮುಂದೂಡುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಸಂಚಾರ ಅಧಿಕಾರಿಗಳು ರವರ

ದೂರವಾಣಿ ಸಂ: 7760992402 ಗೆ ಅಥವಾ ಸಂಚಾರ ಶಾಖೆ, ವಿಭಾಗೀಯ ಕಛೇರಿ, ಕ.ಕ.ರ.ಸಾ. ನಿಗಮ, ಕೊಪ್ಪಳ ವಿಭಾಗ, ಕೊಪ್ಪಳ ರವರಿಗೆ ಸಂಪರ್ಕಿಸಬಹುದಾಗಿದೆ.

6) ಮೇಲ್ಕಂಡ ಮಳಿಗೆಗಳನ್ನು ಜಿ.ಎಸ್.ಓ 150/2017 ಮತ್ತು ಜಿ.ಎಸ್.ಓ. 170/2020 ಹಾಗೂ ಜಿ.ಎಸ್.ಓ 172/2021 ಮತ್ತು ಸುತ್ತೋಲೆ ಸಂ: 706/21 & 173/2021 ರನ್ವಯ ಮೂಲ ಮಾಸಿಕ ಪರವಾನಗಿ ಶುಲ್ಕವನ್ನೇ ಮಿತವ್ಯಯ ಮಾಸಿಕ ಪರವಾನಗಿ ಶುಲ್ಕವನ್ನಾಗಿ ನಿಗಧಿಪಡಿಸಿ ಇ-ಟೆಂಡರ್ ಕರೆಯಲಾಗಿದೆ.
7) ಇ-ಟೆಂಡರ್ ನಲ್ಲಿರುವ ಮಳಿಗೆ/ತೆರೆದ ಜಾಗೆಗಳನ್ನು ಪರವಾನಗಿ ಮೇಲೆ ಪಡೆಯುವ ಸಂಬಂಧ ಇ-ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸಿರುವ ಬಿಡ್‌ದಾರರು ಪೋರ್ಟಲ್‌ನಲ್ಲಿ ಮಳಿಗೆಗೆ ಸಂಬಂಧಿಸಿದ ಅಪಲೋಡ್ ಮಾಡಿರುವ ವಿವರಗಳನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಂಡಿರುವ ಬಗ್ಗೆ ಮತ್ತು ಸಂಸ್ಥೆಯ ಎಲ್ಲಾ ಷರತ್ತು/ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ನಿಗಧಿತ ನಮೂನೆಯನ್ನು ಬಿಡ್‌ದಾರರು ಭರ್ತಿಗೊಳಿಸಿ ಸಹಿ ಮಾಡಿ ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು.
8) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಮೀಸಲಿಟ್ಟ ಮಳಿಗೆಗಳಿಗೆ, ಸಂಬಂಧಪಟ್ಟವರಿಂದ ಇತ್ತೀಚಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಧೃಡೀಕರಣ ಪ್ರಮಾಣ ಸಲ್ಲಿಸಿದ ಅಭ್ಯರ್ಥಿಗಳು ಮಾತ್ರ ಇ-ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ.

**i. ಟೆಂಡರಿನಲ್ಲಿ ಅಪಲೋಡ್ ಮಾಡಬೇಕಾದ ದಾಖಲೆಗಳು: ಬಿಡ್‌ದಾರರು ಈ ಕೆಳಕಂಡ ಅಗತ್ಯ ದಾಖಲೆಗಳನ್ನು ಇ-ಪ್ರೊಕ್ಯೂರಮೆಂಟ್‌ನಲ್ಲಿ ಅಪಲೋಡ್ ಮಾಡಬೇಕಿರುತ್ತದೆ:**

- ವಿಳಾಸ ದೃಢಿಕರಣ ಪ್ರಮಾಣ ಪತ್ರ (ಆಧಾರ ಕಾರ್ಡ, ಓಟರ್ ಐಡಿ, ಬ್ಯಾಂಕ್ ಪಾಸ್ ಬುಕ್, ಪಾಸ್‌ಪೋರ್ಟ).
- ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯ ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು, ಪಾಲುದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು/ಪಾಲುದಾರರ ಪೂರ್ಣ ವಿಳಾಸ ಸಲ್ಲಿಸುವುದು.
- ಬಿಡ್‌ದಾರರು ಕಂಪನಿ/ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್‌ಮಾಡಿದಲ್ಲಿ, ಕಂಪನಿಯ ಇಂಡಿಯನ್ ಕಂಪನೀಸ್ ಕಾಯ್ದೆಯಡಿಯಲ್ಲಿ ನೊಂದಣಿಯಾಗಿರುವ ದಾಖಲಾತಿಗಳನ್ನು ಸಲ್ಲಿಸಬೇಕು.
- ಬಿಡದಾರರು ಕ.ಕ.ರ.ಸಾ.ನಿಗಮ ಮತ್ತು ಇತರೆ ನಿಗಮಗಳಲ್ಲಿ **DEFAULTER** ಆಗದೆ ಇರುವ ಬಗ್ಗೆ ಹಾಗೂ ಕಪ್ಪು ಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ ನೀಡಬೇಕಾಗಿರುತ್ತದೆ.
- ಮೀಸಲಾತಿ ಪಡೆಯಲು ಬಯಸುವ ಬಿಡ್‌ದಾರರು ಮೀಸಲಾತಿಗೆ ನಿಗದಿಪಡಿಸಿದ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸುವುದು.
- ನಿಗದಿಪಡಿಸಿದ ಇ.ಎಂ.ಡಿ, ಮೊತ್ತವನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸುವುದು.
- ನಿಗದಿಪಡಿಸಿದ ಮೀಸಲಾತಿಯ ಪ್ರಮಾಣಪತ್ರವನ್ನು ಬಿಟ್ಟು ಬೇರೆ ಮೀಸಲಾತಿಯ ಪ್ರಮಾಣಪತ್ರದ ದಾಖಲಾತಿ ಮಾಡಿದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಿ **ಇ-ಟೆಂಡರ್** ನಲ್ಲಿ ಪಾವತಿಸಿದ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**ii. ಟೆಂಡರ ಅರ್ಜಿ ಶುಲ್ಕ:**

1) ಮಾಸಿಕ ಪರವಾನಗಿ ಶುಲ್ಕದ ಮೇಲೆ ಶೇ.1 ರಷ್ಟು, ಕನಿಷ್ಠ ರೂ. 100.00 ರಿಂದ ಗರಿಷ್ಟ ರೂ. 3000.00 (GST ಹೊರತುಪಡಿಸಿ) ಅರ್ಜಿ ಶುಲ್ಕವನ್ನು **ಇ-ಟೆಂಡರ್**ಗೆ ನಿಗದಿಪಡಿಸಿದೆ.
2) ಅರ್ಜಿ ಶುಲ್ಕವನ್ನು ಇ.ಎಂ.ಡಿ. ಮೊತ್ತದೊಂದಿಗೆ ಇ-ಪೋರ್ಟಲ್ ಮೂಲಕ ಪಾವತಿಸಬೇಕಾಗುತ್ತದೆ.
3) ಜಿ.ಎಸ್.ಓ 713/2021 ರನ್ವಯ ಟೆಂಡರ ಅರ್ಜಿ ಶುಲ್ಕ ನಿಗಧಿ ಪಡಿಸಿರುವುದಿಲ್ಲ.

**iii. ಇ.ಎಂ.ಡಿ ಮೊತ್ತ :**

1. ಸಂಸ್ಥೆಯು ನಿಗದಿಪಡಿಸಿದ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕದ ಮೂರು (03) ಪಟ್ಟು ಮೊತ್ತವನ್ನು ಇ.ಎಂ.ಡಿ.ಯನ್ನಾಗಿ (Earnest Money Deposit) ನಿಗದಿಪಡಿಸಿದೆ.
2. ಇ.ಎಂ.ಡಿ. ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.

**iv.** ಮೇಲ್ಕಾಣಿಸಿದ ಪಟ್ಟಿಯಲ್ಲಿನ ಕಲಂ ಸಂಖ್ಯೆ 08 ಇ.ಎಂ.ಡಿ ಮೊತ್ತ + 09 ಅರ್ಜಿ ಶುಲ್ಕದ ಮೊತ್ತ + 10 ಅರ್ಜಿ ಶುಲ್ಕಕ್ಕೆ ಜಿ.ಎಸ್.ಟಿ ಮೊತ್ತವನ್ನು ಒಟ್ಟಾರೆಯಾಗಿ ಸೇರಿಸಿ ಇ-ಪೋರ್ಟಲ್ ಮೂಲಕ ಪಾವತಿಸುವುದು/ಯಾವುದೇ ಕಾರಣಕ್ಕೂ ಡಿ.ಡಿ.ಯನ್ನು ಕಛೇರಿಯಲ್ಲಿ ಪಡೆಯಲಾಗುವುದಿಲ್ಲ.

**v. ಪರವಾನಗಿ ಅವಧಿ :**

| ಕ್ರ.ಸಂ. | ಮಳಿಗೆ ಮಾದರಿ / ಸ್ಥಳ | ಪರವಾನಗಿ ಅವಧಿ |
|---|---|---|
| 1 | ತೆರೆದ ಸ್ಥಳದಲ್ಲಿನ ಮಳಿಗೆಗಳು | 3 ವರ್ಷಗಳು |
| 2 | ಕಟ್ಟಿದ ಮಳಿಗೆಗಳು | 5 ವರ್ಷಗಳು |
| 3 | ಡಾರ್ಮಿಟರಿ / ಲಾಡ್ಜಿಂಗ್ / ಕಛೇರಿ ಉದ್ದೇಶಕ್ಕಾಗಿ/ ಮೊಬೈಲ್ ಟವರ್ಸ್ | 10 ವರ್ಷಗಳು |

**vi. ಅಂಗವಿಕಲರಿಗೆ ಮೀಸಲಾತಿ :**

1. ಅಂಗವಿಕಲರಿಗೆ ಮೀಸಲು ಇರುವ ಮಳಿಗೆಗೆ ಅರ್ಜಿ ಸಲ್ಲಿಸುವ ಅರ್ಜಿದಾರರು ಶೇ.40% ರ ಮೇಲ್ಪಟ್ಟು ಅಂಗವಿಕಲತೆಯನ್ನು ಹೊಂದಿರಬೇಕು ಸಂಪೂರ್ಣ ಅಂಧ, ಕಿವುಡ ಮೂಕ ಅಭ್ಯರ್ಥಿಗಳು ಸಹ ಅರ್ಜಿ ಸಲ್ಲಿಸಬಹುದಾಗಿದೆ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ಅಂಗವಿಕಲತೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು, ಅಲ್ಲದೇ ಅರ್ಜಿದಾರರು ತಮ್ಮ ಭಾವ ಚಿತ್ರವನ್ನು ಅಂಟಿಸಬೇಕು ಹಾಗೂ ಪ್ರಮಾಣ ಪತ್ರವನ್ನು ಇ-ಪೋರ್ಟಲ್‌ನಲ್ಲಿ ಅಪಲೋಡ್ ಮಾಡುವುದು.
2. ಅಂಧರು ಮತ್ತು ವಿಕಲಚೇತನರಿಗೆ ಮೀಸಲಿಟ್ಟ ಮಳಿಗೆಗಳನ್ನು ಒಬ್ಬ ಬಿಡ್‌ದಾರರು ಒಂದು ಮಳಿಗೆಯನ್ನು ಮಾತ್ರ ಮೀಸಲಾತಿ ಆಧಾರದ ಮೇಲೆ ಪಡೆಯಲು ಅವಕಾಶವಿದೆ.
3. ನಾಲ್ಕು ರಾಜ್ಯ ಸಾರಿಗೆ ಸಂಸ್ಥೆಗಳ/ಸಂಸ್ಥೆ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಮತ್ತು ಇತರೆ ಸರ್ಕಾರಿ ಇಲಾಖೆಗಳಲ್ಲಿ ಯಾವುದೇ ಮಳಿಗೆಗಳ ಪರವಾನಿಗೆಯನ್ನು ಮೀಸಲಾತಿ ಆಧಾರದ ಮೇಲೆ ಪಡೆದಿರುವುದಿಲ್ಲ ಎಂಬ ಬಗ್ಗೆ ಸ್ವಯಂ ದೃಢೀಕರಣವನ್ನು ಬಿಡ್‌ದಾರರು ಇ-ಟೆಂಡರಿನಲ್ಲಿ ಅಪ್‌ಲೋಡ್ ಮಾಡುವುದು.
4. ಈ ನಿಯಮವನ್ನು ಬಿಡ್‌ದಾರರು ಉಲ್ಲಂಘಿಸಿರುವುದು ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ ಇ.ಎಂ.ಡಿ/ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಆಯ್ಕೆ/ಕರಾರು ಒಪ್ಪಂದನ್ನು ರದ್ದುಗೊಳಿಸಲಾಗುವುದು.

**vii. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮೀಸಲಾತಿ :**

1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಮೀಸಲಿಟ್ಟ ಮಳಿಗೆಗಳಿಗೆ, ಸಂಬಂಧಪಟ್ಟ ಪ್ರಾಧಿಕಾರಸ್ಥರವರಿಂದ ಇತ್ತೀಚಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಧೃಡೀಕರಣ ಪ್ರಮಾಣ ಪತ್ರವನ್ನು ಆನ್‌ಲೈನ್‌ನಲ್ಲಿ **ಇ-ಟೆಂಡರ್**ನಲ್ಲಿ ಅಪ್‌ಲೋಡ್ ಮಾಡುವುದು.
2. ಮೀಸಲಾತಿಯಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮೀಸಲಾತಿ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗಾಗಿ ಸಲ್ಲಿಸತ್ತಕ್ಕದು.
3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟ ಮಳಿಗೆಗಳಲ್ಲಿ ಒಬ್ಬ ಬಿಡ್‌ದಾರರು ಒಂದು ಮಳಿಗೆಯನ್ನು ಮಾತ್ರ ಮೀಸಲಾತಿ ಆಧಾರದ ಮೇಲೆ ಪಡೆಯಲು ಅವಕಾಶವಿದೆ. ನಾಲ್ಕು ರಾಜ್ಯ ಸಾರಿಗೆ ಸಂಸ್ಥೆಗಳ / ಸಂಸ್ಥೆ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಮತ್ತು ಇತರೆ ಸರ್ಕಾರಿ ಇಲಾಖೆಗಳಲ್ಲಿ ಯಾವುದೇ ಮಳಿಗೆಗಳ ಪರವಾನಿಗೆಯನ್ನು ಮೀಸಲಾತಿ ಆಧಾರದ ಮೇಲೆ ಪಡೆದಿರುವುದಿಲ್ಲ ಎಂಬ ಬಗ್ಗೆ ಸ್ವಯಂ ದೃಢೀಕರಣವನ್ನು ಬಿಡ್‌ದಾರರು **ಇ-ಟೆಂಡರ್**ನಲ್ಲಿ ಅಪಲೋಡ್ ಮಾಡುವುದು.
4. ಈ ನಿಯಮವನ್ನು ಬಿಡ್‌ದಾರರು ಉಲ್ಲಂಘಿಸಿರುವುದು ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ ಇ.ಎಂ.ಡಿ/ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಆಯ್ಕೆ/ಕರಾರು ಒಪ್ಪಂದನ್ನು ರದ್ದುಗೊಳಿಸಲಾಗುವುದು.

**viii. ಟೆಂಡರ್ ಮಾನ್ಯತಾ ಅವಧಿ** : ಒಂದು ವೇಳೆ ನಿಗದಿಪಡಿಸಿದ ಮಾನ್ಯತಾ ಅವಧಿಯಲ್ಲಿ ಟೆಂಡರ್ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲು ಸಾಧ್ಯವಾಗದಿದ್ದಲ್ಲಿ, ಟೆಂಡರ್ ಮಾನ್ಯತಾ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಸಂಸ್ಥೆ ಹೊಂದಿರುತ್ತದೆ.

**ix. ಆಯ್ಕೆ ವಿಧಾನ :**

1) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ **ಇ-ಟೆಂಡರ್** ಗಳನ್ನು ಆಹ್ವಾನಿಸುವ ವಾಣಿಜ್ಯ ಮಳಿಗೆ/ತೆರೆದ ಜಾಗೆಗಳಿಗೆ ನಿಗದಿಪಡಿಸಿದ ಮಾಸಿಕ ಮಿತವ್ಯಯ ಪರವಾನಿಗೆ ಶುಲ್ಕಕ್ಕಿಂತ ಅತೀ ಹೆಚ್ಚಿನ ಮೊತ್ತವನ್ನು ಬಿಡ್ ಮಾಡಿರುವ ಬಿಡ್‌ದಾರರನ್ನು (H-1) ಪರವಾನಿಗೆದಾರನ್ನಾಗಿ ಆಯ್ಕೆ ಮಾಡಲಾಗುವುದು.
2) ಹೆಚ್-01 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಂಡ ನಂತರ ಹೆಚ್-02 ಬಿಡ್‌ದಾರರ ಇ.ಎಂ.ಡಿ ಮೊತ್ತ ಹಿಂತಿರುಗಿಸಲಾಗುವುದು, ಹಾಗೂ ಈ ಮೊತ್ತಕ್ಕೆ ಬಡ್ಡಿ ನೀಡುವುದಿಲ್ಲ.
3) ಇ-ಟೆಂಡರಿನಲ್ಲಿ ನಿಗದಿತ ಮಾಸಿಕ ಪರವಾನಿಗೆ ಶುಲ್ಕಕ್ಕಿಂತ ಹೆಚ್ಚಿನ ಮೊತ್ತವನ್ನು H-1 & H-2 ಬಿಡ್‌ದಾರರು ನಮೂದಿಸಿದ ಸಂದರ್ಭದಲ್ಲಿ H-1 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಳ್ಳಲು ಹಿಂದೆ ಸರಿದಲ್ಲಿ/ವಿಫಲರಾದಲ್ಲಿ, ಸದರಿಯವರ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು H-2 ಬಿಡ್‌ದಾರರನ್ನು ಆಯ್ಕೆ ಮಾಡಲು ಕ್ರಮ ಕೈಕೊಳ್ಳಲಾಗುವುದು.
4) H-2 ಬಿಡ್‌ದಾರರನ್ನು ಪರವಾನಿಗೆದಾರನ್ನಾಗಿ ಆಯ್ಕೆ ಮಾಡುವಾಗ H-1 ಬಿಡದಾರರು ಬಿಡ್ ಮಾಡಿದ ಮೊತ್ತಕ್ಕೆ ಸಮನಾಗಿ ಪರವಾನಿಗೆ ಶುಲ್ಕವನ್ನು ನೀಡಬೇಕಾಗಿರುತ್ತದೆ. ಇದಕ್ಕೆ ಒಪ್ಪದೆ ಇದ್ದಲ್ಲಿ ಕೇಂದ್ರ ಕಚೇರಿಯ ವಾಣಿಜ್ಯ ಮುಖ್ಯಸ್ಥರ ತಿರ್ಮಾನವೇ ಅಂತಿಮವಾಗಿರುತ್ತದೆ.
5) **H-2 ಬಿಡ್ಡುದಾರರು ತಾವು ನಮೂದಿಸಿದ ಮೊತ್ತದನ್ವಯ ಕರಾರು ಒಪ್ಪಂದ ಮಾಡಿಕೊಳ್ಳದೇ ಇದ್ದಲ್ಲಿ ಅವರ ಇ.ಎಂ.ಡಿ.ಯನ್ನು ಮೊತ್ತ ಮುಟ್ಟುಗೋಲು ಹಾಕಿ ಕೊಂಡು ಕಪ್ಪು ಪಟ್ಟಿಗೆ ಸೇರಿಸಲಾಗುವುದು.**

6) ಇ–ಟೆಂಡರಿನಲ್ಲಿ ಒಂದಕ್ಕಿಂತ ಹೆಚ್ಚಿನ ಬಿಡ್‌ದಾರರು ಒಂದೇ ಮೊತ್ತವನ್ನು ನಮೂದಿಸಿದಲ್ಲಿ ಅಂತಹ ಬಿಡ್‌ದಾರರೊಂದಿಗೆ ಸಂಧಾನವನ್ನು ನಡೆಸಿ, ಹೆಚ್ಚಿನ ಮೊತ್ತವನ್ನು ನಮೂದಿಸಿದಂತಹ ಬಿಡ್‌ದಾರರನ್ನು ಪರವಾನಿಗೆದಾರನ್ನಾಗಿ ಆಯ್ಕೆ ಮಾಡಲಾಗುವುದು.
7) **ಇ–ಟೆಂಡರ್** ಬಿಡ್ಡುದಾರರು ಇ–ಪೋರ್ಟಲ್ ನಲ್ಲಿ ನಮೂದಿಸುವ ದರಗಳನ್ನು ಮಾತ್ರ ಪರಿಗಣಿಸಲಾಗುವುದು
8) ಟೆಂಡರ್ ದಾಖಲಾತಿಗಳೊಂದಿಗೆ ಇನ್ನಾವುದೇ ಅನುಬಂಧಗಳು ನಮೂನೆಗಳು ಮತ್ತು ಇತರರ ಮಾಧ್ಯಮದ ಮೂಲಕ ಆರ್ಥಿಕ ಬಿಡ್ಡ್ ಕುರಿತು ಬಿಡ್ಡುದಾರರು ಸಲ್ಲಿಸುವ ದರಗಳನ್ನು ಪರಿಗಣಿಸಲಾಗುವುದಿಲ್ಲ.

**x. ಭದ್ರತಾ ಠೇವಣಿ :**

1. ಕೆಳಕಂಡಂತೆ ನಿಗದಿತ ಭದ್ರತಾ ಠೇವಣಿ ಮೊತ್ತವನ್ನು ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕ್‌ನಿಂದ ಪಡೆದ ಡಿ.ಡಿ. /ಖಖಿಉಖ/ಓಇಈಖ ಮೂಲಕ ಪಾವತಿಸುವುದು. ಒಂದು ವೇಳೆ ಆನ್‌ಲೈನ್ ಮೂಲಕ ಹಣ ವಗಾಯಿಸಿದ್ದಲ್ಲಿ, ವರ್ಗಾಯಿಸಿದ ದಾಖಲಾತಿಗಳನ್ನು ಕ.ಕ.ರ.ಸಾ.ನಿಗಮ; ಕೊಪ್ಪಳ ವಿಭಾಗೀಯ ಕಚೇರಿಗೆ ಸಲ್ಲಿಸುವುದು.

| ಕ್ರ.ಸಂ. | ಪರವಾನಗಿ ಅವಧಿ | ಒಟ್ಟು ಪಾವತಿಸಿಕೊಳ್ಳಬೇಕಿರುವ ಭದ್ರತಾ ಠೇವಣಿ |
|---|---|---|
| 1 | 3 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 6 ಪಟ್ಟು |
| 2 | 5 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 8 ಪಟ್ಟು |
| 3 | 10 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 10 ಪಟ್ಟು |

2. ಭದ್ರತಾ ಠೇವಣಿಗೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
3. ಆಯ್ಕೆಗೊಂಡ ಪರವಾನಗಿದಾರರ ಇ.ಎಂ.ಡಿ. ಮೊತ್ತವನ್ನು ಭದ್ರತಾ ಠೇವಣಿ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಂಡು, ಉಳಿಕೆ ಮೊತ್ತವನ್ನು ಪಾವತಿಸುವುದು.
4. ಪರವಾನಗಿ ಅವಧಿ ಮುಕ್ತಾಯವಾದ ನಂತರ ಸಂಸ್ಥೆಗೆ ಪಾವತಿಸಬೇಕಾದ ಬಾಕಿ ಶುಲ್ಕಗಳನ್ನು ಕಡಿತಗೊಳಿಸಿ ಉಳಿದ ಭದ್ರತಾ ಠೇವಣಿಯನ್ನು ಪರವಾನಗಿದಾರರಿಗೆ ಹಿಂತಿರುಗಿಸಲಾಗುವುದು.

**xi. ಕರಾರು ಒಪ್ಪಂದ :**

1. ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ ದಿನಾಂಕದಿಂದ 15 ದಿನದೊಳಗಾಗಿ ನಿಗದಿತ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕ, ಸರಕು ಮತ್ತು ಸೇವಾ ತೆರಿಗೆಯನ್ನು ಪಾವತಿಸಿ, ಸೂಕ್ತ ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳುವುದು.
2. ಆಯ್ಕೆಯಾದ ಬಿಡ್‌ದಾರರು (ಹೆಚ್–01/ಹೆಚ್–02) ಆಯ್ಕೆ ಪತ್ರ ತಲುಪಿದ 15 ದಿನದೊಳಗೆ ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ಸಂಸ್ಥೆಗೆ ಮುಟ್ಟುಗೋಲು ಹಾಕಿಕೊಂಡು ಮುಂದಿನ 02 ವರ್ಷಗಳ ಕಾಲ ಅವರ ಹೆಸರನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು.
3. ವಾಣಿಜ್ಯ ಮಳಿಗೆಗಳಿಗೆ ಆಯ್ಕೆಯಾದ ಪರವಾನಗಿದಾರರು ಕರ್ನಾಟಕ ಸ್ಟಾಂಪ್ ಆ್ಯಕ್ಟ್–2010 ರನ್ವಯ ಒಂದು ವರ್ಷ ಮೀರುವ ಮತ್ತು 10 ವರ್ಷ ಮೀರದೆ ಇರುವ ಪರವಾನಗಿ ಅವಧಿಗೆ, ಒಟ್ಟು ಪರವಾನಗಿ ಅವಧಿಯ ಶುಲ್ಕದ (ಪ್ರತಿ ವರ್ಷ ಶೇಕಡ 10% ರಷ್ಟು ಹೆಚ್ಚಳ ಸೇರಿದಂತೆ) ಸರಾಸರಿ ಮೊತ್ತದ ಮೇಲೆ ಶೇಕಡ 1 ರಷ್ಟು ಹಾಗೂ ಭದ್ರತಾ ಠೇವಣಿ ಮೊತ್ತದ ಮೇಲೆ ಶೇಕಡ 1% ರಷ್ಟು ಸ್ಟಾಂಪ್ ಶುಲ್ಕವನ್ನು ಪಾವತಿಸಿ ಸಂಸ್ಥೆಯೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳುವುದು.
4. ಮಾಸಿಕ ಪರವಾನಿಗೆ ಶುಲ್ಕ, ಸರಕು & ಸೇವಾ ತೆರಿಗೆ ಮತ್ತು ಇತರೆ ಶುಲ್ಕಗಳನ್ನು ಸತತವಾಗಿ 2 ತಿಂಗಳು ಪಾವತಿಸದೆ ಬಾಕಿ ಉಳಿಸಿಕೊಂಡಲ್ಲಿ ಅಂತಹ ಮಳಿಗೆಗಳ ಪರವಾನಿಗೆಯನ್ನು ಸಂಸ್ಥೆಯ ವತಿಯಿಂದ ರದ್ದುಪಡಿಸಿ, ಪರವಾನಿಗೆದಾರರು ಸಂಸ್ಥೆಯಲ್ಲಿಟ್ಟಿರುವ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಕೈಕೊಳ್ಳಲಾಗುವುದು.

**xii. ಮಾಸಿಕ ಪರವಾನಗಿ ಶುಲ್ಕ ಮತ್ತು ಸೇವಾ ತೆರಿಗೆ ಪಾವತಿ:**

1. ಪರವಾನಗಿದಾರರು ಪ್ರತಿ ಮಾಹೆ 07 ನೇ ತಾರಿಖಿನೊಳಗಾಗಿ ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಶುಲ್ಕವನ್ನು (ಪ್ರಸ್ತುತ ಶೇಕಡ 18%), ಮುಂಗಡವಾಗಿ ಸಂಸ್ಥೆಗೆ ಪಾವತಿಸಬೇಕು.
2. ಇನ್‌ವಾಯ್ಸ್‌ನಲ್ಲಿ ನಮೂದಿಸಿದ ಪೂರ್ಣ ಮೊತ್ತವನ್ನು ಪರವಾನಗಿದಾರರು ಪಾವತಿಸಬೇಕಿರುತ್ತದೆ. ಒಂದು ವೇಳೆ ಇನ್‌ವಾಯ್ಸ್ ಮೊತ್ತ ಪಾವತಿಸಲು ಪರವಾನಗಿದಾರರು ತಡಮಾಡಿದಲ್ಲಿ, ಬಾಕಿ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಮೇಲೂ ವಾರ್ಷಿಕ ಶೇಕಡ 18% ರಷ್ಟು ಬಡ್ಡಿಯನ್ನು ಕನಿಷ್ಠ ರೂ. 100/– ರಂತೆ, ವಿಳಂಬದ ದಿನಗಳ ಲೆಕ್ಕದಲ್ಲಿ ವಿಧಿಸಲಾಗುವುದು.
3. ಪರವಾನಗಿದಾರರು **GST** ನೋದಣಿ ಮತ್ತು ಇದಕ್ಕೆ ಪೂರಕವಾದ ದಾಖಲೆಗಳನ್ನು ಲಭ್ಯವಿದ್ದಲ್ಲಿ ಸಲ್ಲಿಸುವುದು.

4. ಮಾಸಿಕ ಪರವಾನಗಿ ಶುಲ್ಕ, ಸರಕು & ಸೇವಾ ತೆರಿಗೆ ಮತ್ತು ಇತರೆ ಶುಲ್ಕಗಳನ್ನು ಸಂಬಂಧಿಸಿದ ವಿಭಾಗ/ಘಟಕ/ಬಸ್ ನಿಲ್ದಾಣದ ಲೆಕ್ಕ ಪತ್ರ ಶಾಖೆಯಲ್ಲಿ DD (ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕುಗಳ)/ RTGS /NEFT ಮೂಲಕ ಪಾವತಿಸುವುದು.
5. ಮಾಸಿಕ ಪರವಾನಗಿ ಶುಲ್ಕವು ಪ್ರತಿ ವರ್ಷ ಶೇಕಡ 10% ರಷ್ಟು ಹೆಚ್ಚಳವಾಗುವುದು. ಇದಕ್ಕನುಗುಣವಾಗಿ ಸರಕು ಮತ್ತು ಸೇವಾ ತೆರಿಗೆಯು ಹೆಚ್ಚಳವಾಗುವುದು.
6. ಮುಷ್ಕರ/ಬಂದ್ ಅವಧಿಯಲ್ಲಿ ಮಾಸಿಕ ಪರವಾನಿಗೆ ಶುಲ್ಕದಲ್ಲಿ ರಿಯಾಯಿತಿಗೆ ಅವಕಾಶಗಳಿರುವುದಿಲ್ಲ.

**xiii. ವಿದ್ಯುಚ್ಛಕ್ತಿ ಹಾಗೂ ನೀರಿನ ಬಿಲ್ಲುಗಳ ಪಾವತಿ:**

1. ಪ್ರತಿಯೊಂದು ಮಳಿಗೆಗೂ ಪ್ರತ್ಯೇಕ ವಿದ್ಯುಚ್ಛಕ್ತಿ ಮೀಟರನ್ನು ಅಳವಡಿಸಿಕೊಳ್ಳುವುದು. ವಿದ್ಯುತ್ ಸಂಪರ್ಕವನ್ನು ಸಂಸ್ಥೆಯ ವತಿಯಿಂದ ಒದಗಿಸಿದ್ದಲ್ಲಿ, ಸಂಸ್ಥೆಯು ಸೂಚಿಸುವ ವಿದ್ಯುತ್ ಬಿಲ್ ಮೊತ್ತವನ್ನು ಪಾವತಿಸತಕ್ಕದ್ದು. ಒಂದು ವೇಳೆ ವಿದ್ಯುತ್ ಬಿಲ್ ಮೊತ್ತವನ್ನು ಪಾವತಿಸಲು ವಿಳಂಭ ಮಾಡಿದ್ದಲ್ಲಿ, ಬಡ್ಡಿ ಸಮೇತ ಬಿಲ್ ಮೊತ್ತವನ್ನು ಪಾವತಿಸಿಕೊಳ್ಳಲಾಗುವುದು.
2. ಸಂಸ್ಥೆಯ ಕೊಳವೆ ಬಾವಿಗಳಿಂದ ನೀರಿನ ಸೌಲಭ್ಯವನ್ನು ಕಲ್ಪಿಸಿರುವಂತಹ ಮಳಿಗೆಗಳ ಪರವಾನಿಗೆದಾರರು ಮಾಸಿಕ ಪರವಾನಗಿ ಶುಲ್ಕದ ಶೇಕಡ 2% ರಷ್ಟು ಅಥವಾ ಕೊಳವೆ ಭಾವಿಯ ವಿದ್ಯುತ್ ಬಿಲ್ಲಿನ ಶೇಕಡ 50% ರಷ್ಟು, ಇದರಲ್ಲಿ ಯಾವುದು ಹೆಚ್ಚಿನದು, ಆ ಮೊತ್ತವನ್ನು ಪಾವತಿಸಬೇಕು.
3. ಒಂದು ವೇಳೆ ಮಳಿಗೆಗಳಿಗೆ ಜಲಮಂಡಳಿ/ಸಂಬಂಧಿಸಿದ ಇಲಾಖೆಗಳಿಂದ ಪ್ರತ್ಯೇಕವಾಗಿ ನೀರಿನ ಮೀಟರ್ ಅಳವಡಿಸಿದಲ್ಲಿ, ಅಂತಹ ಮಳಿಗೆಯ ಪರವಾನಿಗೆದಾರರು ಅನ್ವಯಿಸುವ ನೀರಿನ ಶುಲ್ಕವನ್ನು ಸಂಬಂಧಿಸಿದ ಇಲಾಖೆಗೆ ಪಾವತಿಸಬೇಕು.
4. ಪ್ರತಿ ಮಾಹೆಯ ವಿದ್ಯುಚ್ಛಕ್ತಿ ಹಾಗೂ ನೀರಿನ ಬಿಲ್ಲುಗಳನ್ನು ನಿಗಧಿತ ಸಮಯದಲ್ಲಿ ಪಾವತಿಸಬೇಕು.
5. ಒಂದು ವೇಳೆ ಸಂಸ್ಥೆಯ ವತಿಯಿಂದ ನೀರಿನ ಸರಬರಾಜು ಮಾಡಲು ಸಾಧ್ಯವಾಗದಿದ್ದಲ್ಲಿ, ಪರವಾನಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಿರುತ್ತದೆ.ಈ ರೀತಿ ವ್ಯವಸ್ಥೆಯನ್ನು ಮಾಡಿಕೊಳ್ಳಲು ತಗಲುವ ವೆಚ್ಚವನ್ನು ಗುತ್ತಿಗೆದಾರರೇ ಭರಿಸಿಕೊಳ್ಳುವುದು. ಇದಕ್ಕೆ ಸಂಸ್ಥೆಯಿಂದ ಯಾವುದೇ ಶುಲ್ಕವನ್ನು ನೀಡಲಾಗುವುದಿಲ್ಲ
6. ಪರವಾನಿಗೆದಾರರು ಕೊಳವೆ ಬಾವಿ (Borewell) ಕೊರೆಸಲು ಅನುಮತಿ ಕೋರಿದಲ್ಲಿ, ಸ್ಥಳೀಯ ಸಂಸ್ಥೆಗಳ ನಿಯಮಾವಳಿಗಳು, ವಾಣಿಜ್ಯ, ಸ್ಥಳ, ಬಸ್ ನಿಲ್ದಾಣದಲ್ಲಿ ಹಾಲಿ ಇರುವಂತಹ ಬೋರವೆಲ್‌ಗಳ ಆಧಾರದಲ್ಲಿ ನಿರ್ಧರಿಸಲಾಗುವುದು. ಸಂಸ್ಥೆಯ ತೀರ್ಮಾನಕ್ಕೆ ಪರವಾನಿಗೆದಾರರು ಬದ್ಧರಾಗಿರಬೇಕು.

**xiv. ಹೆಚ್ಚುವರಿ ಸ್ಥಳಾವಕಾಶ:**

1. ಪರವಾನಿಗೆದಾರರು ಟೆಂಡರ್/ಕರಾರು ಒಪ್ಪಂದದಲ್ಲಿ ನಮೂದಿಸಿದ ಸ್ಥಳದ ವಿಸ್ತೀರ್ಣಕ್ಕಿಂತ ಆ ವಾಣಿಜ್ಯ ಮಳಿಗೆಗೆ ಹೊಂದಿಕೊಂಡಂತೆ ಇರುವ ಹೆಚ್ಚುವರಿ ಸ್ಥಳವನ್ನು ಬಳಸಲು ಉದ್ದೇಶಿಸಿ, ಮನವಿ ನೀಡಿದಲ್ಲಿ, ಟೆಂಡರ್/ಕರಾರು ಒಪ್ಪಂದದಲ್ಲಿ ನಮೂದಿಸಿದ ವಿಸ್ತೀರ್ಣದ ಶೇಕಡ 10% ರಷ್ಟು ವಿಸ್ತೀರ್ಣದ ಸ್ಥಳವನ್ನು, ಪ್ರಸ್ತುತ ಪಾವತಿಸುತ್ತಿರುವ ಪ್ರತಿ ಚದರ ಅಡಿ ಪರವಾನಗಿ ಶುಲ್ಕದ 1.5 ರಷ್ಟು ಪಟ್ಟು ಮೊತ್ತವನ್ನು ಮಾಸಿಕ ಪರವಾನಗಿ ಶುಲ್ಕ, ಇದಕ್ಕೆ ಉಂಟಾಗುವ ಹೆಚ್ಚುವರಿ ಭದ್ರತಾ ಠೇವಣಿ ಹಾಗೂ ಸರಕು & ಸೇವಾ ತೆರಿಗೆಯನ್ನು ಪರವಾನಗಿದಾರರು ಪಾವತಿಸುವುದು. ಹೆಚ್ಚುವರಿ ಸ್ಥಳಾವಕಾಶ ಬಳಸಿಕೊಂಡು ಪ್ರತ್ಯೇಕ ಮಳಿಗೆ, ಕೌಂಟರ್, ವ್ಯವಹಾರ ಮಾಡಲು ಅವಕಾಶವಿರುವುದಿಲ್ಲ.
2. ಸಣ್ಣ ವಿಸ್ತೀರ್ಣದ ಮಳಿಗೆಗಳಿಗೆ, ಅಂದರೆ 200 ಚದರಡಿ ವಿಸ್ತೀರ್ಣದ ಒಳಗಿನ ಮಳಿಗೆಗಳಿಗೆ ಹೆಚ್ಚುವರಿ ಸ್ಥಳಾವಕಾಶ ಅನ್ವಯಿಸುವುದಿಲ್ಲ.

**xv. ಅನಧಿಕೃತವಾಗಿ ಹೆಚ್ಚುವರಿ ಸ್ಥಳಾವಕಾಶದ ಬಳಕೆ :**

1. ಪರವಾನಿಗೆದಾರರು ಅನಧಿಕೃತವಾಗಿ ಬಳಸಿದ ಹೆಚ್ಚುವರಿ ಸ್ಥಾವಕಾಶವನ್ನು ನೋಟಿಸ್ ನೀಡಿದ ಕೂಡಲೇ ತೆರವುಗೊಳಿಸಬೇಕು. ಇದಲ್ಲದೆ, ಪರವಾನಿಗೆದಾರರಿಗೆ ಕೆಳಕಂಡಂತೆ ದಂಡ ವಿಧಿಸಿ ಹಾಗೂ ಕರಾರನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

| **ಮೊದಲ ಬಾರಿಗೆ** | **ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 3 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸಲಾಗುವುದು.** | **ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು.** |
|---|---|---|
| ಎರಡನೇ ಬಾರಿಗೆ ಹಾಗೂ ಪುನರಾವರ್ತನೆಗೊಂಡಲ್ಲಿ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 5 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸುವುದು. ಇದಲ್ಲದೇ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು, ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ಸಂಸ್ಥೆಯು ಹೊಂದಿರುತ್ತದೆ. | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು. |

**xvi. ಕರಾರು ರದ್ದತಿಯ ಷರತ್ತುಗಳು :**

1. **ಯಾವುದೇ ಕಾರಣ ನೀಡದೆ, 4 ತಿಂಗಳ ನೋಟಿಸ್ ನೀಡಿ ಮಳಿಗೆಯ ಪರವಾನಿಗೆಯನ್ನು ರದ್ದುಪಡಿಸಲು ಸಂಸ್ಥೆಯು ಅಧಿಕಾರವನ್ನು ಹೊಂದಿರುತ್ತದೆ.**

2. **<u>ಹೊಸದಾಗಿ ಆಯ್ಕೆಯಾದ ಪರವಾನಗಿದಾರರು ಕನಿಷ್ಠ 02 ವರ್ಷಗಳ ಕಾಲ ಪರವಾನಿಗೆಯನ್ನು ನಡೆಸಬೇಕು. ಒಂದು ವೇಳೆ 02 ವರ್ಷದೊಳಗಡೆ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಇಚ್ಛಿಸಿದಲ್ಲಿ. 06 ತಿಂಗಳ ಮುಂಗಡ ಮನವಿ ಸಲ್ಲಿಸಬೇಕು. ಮುಂಗಡ ಮನವಿ ಸಲ್ಲಿಸುವ ಸಮಯದಲ್ಲಿ ಯಾವುದೇ ಹಿಂಬಾಕಿ ಇರಬಾರದು. ನೋಟೀಸು ನೀಡಿದ 06 ತಿಂಗಳ ಅವಧಿಯಲ್ಲಿ ಮಳಿಗೆಯನ್ನು ನಡೆಸಲು ಇಚ್ಛಿಸಿದಲ್ಲಿ ಆಯಾ ತಿಂಗಳು ಮುಂಗಡವಾಗಿ ಪರವಾನಗಿ ಶುಲ್ಕ ಪಾವತಿಸಬೇಕಾಗಿರುತ್ತದೆ.</u>**
3. **<u>ಎರಡು ವರ್ಷದೊಳಗಡೆ ಪರವಾನಿಗೆ ರದ್ದತಿ ಮಾಡಿಕೊಳ್ಳುವ ಪರವಾನಗಿದಾರರ ಭದ್ರತಾ ಠೇವಣಿ ಮೊತ್ತವನ್ನು ಪೂರ್ಣವಾಗಿ ಮುಟ್ಟುಗೋಲು ಹಾಕಿಕೊಳ್ಳಲು ಹಾಗೂ ಕಪ್ಪು ಪಟ್ಟಿಗೆ ಸೇರಿಸಲಾಗುವುದು.</u>**
4. **<u>ಎರಡು ವರ್ಷದೊಳಗಡೆ ಪರವಾನಿಗೆ ರದ್ದತಿ ಮಾಡಿಕೊಳ್ಳುವ ಪರವಾನಿಗೆದಾರರ ಹೆಸರನ್ನು ಮುಂದಿನ ಎರಡು ವರ್ಷಗಳ ಅವಧಿಗೆ ಕಕರಸಾ/ವಾಕರಸಾ/ಕರಸಾ/ಬಿಎಂಟಿಸಿ ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್ ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.</u>**
5. **<u>ಒಂದು ವೇಳೆ ಪರವಾನಿಗೆ ರದ್ದತಿಯ ಜಾರಿಯ ದಿನಾಂಕದಿಂದ ಎರಡು ವರ್ಷಗಳಗೂ ಮೇಲ್ಪಟ್ಟಲ್ಲಿ ಅಂತಹ ಪರವಾನಿಗೆದಾರರಿಗೆ ಕಪ್ಪು ಪಟ್ಟಿಗೆ ಸೇರಿಸುವುದರಿಂದ ವಿನಾಯಿತಿ ನೀಡಲಾಗುವುದು.</u>**
6. **<u>ಎರಡು ವರ್ಷದ ನಂತರ ಕರಾರು ರದ್ದತಿಮಾಡಿಕೊಳ್ಳಲು ಪರವಾನಗಿದಾರರು ಇಚ್ಛಿಸಿದಲ್ಲಿ 4 ತಿಂಗಳ ಮುಂಗಡ ನೋಟೀಸ್ ನೀಡಲು ಸದರಿ 04 ತಿಂಗಳು ಮಳಿಗೆಯನ್ನು ನಡೆಸಿ, ಅಯಾ ತಿಂಗಳು ಮುಂಗಡವಾಗಿ ಪರವಾನಗಿ ಶುಲ್ಕ ಪಾವತಿಸಬೇಕಾಗುತ್ತದೆ.</u>**
7. **<u>ಮಾಸಿಕ ಪರವಾನಗಿ ಶುಲ್ಕ, ಸರಕು & ಸೇವಾ ತೆರಿಗೆ ಮತ್ತು ಇತರೆ ಶುಲ್ಕಗಳನ್ನು ಸತತವಾಗಿ 2 ತಿಂಗಳು ಪಾವತಿಸದೆ ಬಾಕಿ ಉಳಿಸಿಕೊಂಡಲ್ಲಿ ಅಂತಹ ಮಳಿಗೆಗಳ ಪರವಾನಗಿಯನ್ನು ಸಂಸ್ಥೆಯ ವತಿಯಿಂದ ರದ್ದುಪಡಿಸಿ, ಪರವಾನಗಿದಾರರು ಸಂಸ್ಥೆಯಲ್ಲಿಟ್ಟಿರುವ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.</u>**

**xvii. ಬಿಡ್‌ದಾರರು / ಪರವಾನಗಿದಾರರ ಹೆಸರನ್ನು ಕಪ್ಪು ಪಟ್ಟಿಗೆ ಸೇರಿಸುವ ಸಂದರ್ಭಗಳು :**

1. **<u>ಇ-ಟೆಂಡರ್</u>**ನಲ್ಲಿ ಅರ್ಹಗೊಳ್ಳುವ ಸಲುವಾಗಿ ಬಿಡ್‌ದಾರರು/ಪರವಾನಗಿದಾರರು ಸಲ್ಲಿಸಿರುವ ದಾಖಲೆಗಳು ಯಾವುದೆ ಹಂತದಲ್ಲಿ ನೈಜತೆಯಿಂದ ಕೂಡಿಲ್ಲದಿರುವುದು ಕಂಡು ಬಂದಲ್ಲಿ ಅಂತಹ ಬಿಡ್‌ದಾರರ ಆಯ್ಕೆ/ಪರವಾನಗಿದಾರರ ಪರವಾನಗಿಯನ್ನು ರದ್ದುಪಡಿಸಿ, ಸಂಸ್ಥೆಯಲ್ಲಿಟ್ಟಿರುವ ಇ.ಎಂ.ಡಿ./ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅಂತಹ ಬಿಡ್‌ದಾರರನ್ನು/ಪರವಾನಗಿದಾರರನ್ನು ಮುಂದಿನ 2 ವರ್ಷಗಳ ಅವಧಿಗೆ ಕ.ಕ.ರ.ಸಾ.ನಿಗಮ ವತಿಯಿಂದ ಆಹ್ವಾನಿಸಲಾಗುವ ಯಾವುದೇ **<u>ಇ-ಟೆಂಡರ್</u>**ನಲ್ಲಿ ಭಾಗವಹಿಸದಂತೆ ಕಪ್ಪು ಪಟ್ಟಿಗೆ ಸೇರಿಸಲಾಗುವುದು.
2. ಬಿಡ್‌ದಾರರು ಬಿಡ್ ಹಿಂದಕ್ಕೆ ಪಡೆದಲ್ಲಿ ಅಥವಾ ತಿದ್ದುಪಡಿಗೊಳಿಸಿದಲ್ಲಿ ಅಥವಾ ಅಗೌರವ ತರುವಂತಹ ಸಂದರ್ಭಗಳಲ್ಲಿ, ಇ.ಎಂ.ಡಿ. ಮೊತ್ತ ಮುಟ್ಟುಗೋಲು ಹಾಕಿಕೊಂಡು ಮುಂದಿನ 2 ವರ್ಷಗಳ ಅವಧಿಗೆ ಕ.ಕ.ರ.ಸಾ.ನಿಗಮದ ವತಿಯಿಂದ ಅಹ್ವಾನಿಸಲಾಗುವ ಯಾವುದೇ **<u>ಇ-ಟೆಂಡರ್</u>**ನಲ್ಲಿ ಭಾಗವಹಿಸದಂತೆ ಕಪ್ಪು ಪಟ್ಟಿಗೆ ಸೇರಿಸಲಾಗುವುದು.
3. ಎರಡು ವರ್ಷದ ಅವಧಿಯೊಳಗೆ ಯಾವುದೆ ಕಾರಣದಿಂದ ಪರವಾನಗಿ ರದ್ದುಗೊಳ್ಳುವಂತಹ ಮತ್ತು ಎರಡು ವರ್ಷದ ಅವಧಿಯೊಳಗೆ ಪರವಾನಗಿಯನ್ನು ರದ್ದುಪಡಿಸುವಂತೆ ಮನವಿ ಸಲ್ಲಿಸುವ ಪರವಾನಗಿದಾರರನ್ನು, ಮನವಿ ಸಲ್ಲಿಸಿದ ದಿನಾಂಕದಿಂದ ಮುಂದಿನ 2 ವರ್ಷಗಳ ಅವಧಿಗೆ ಕ.ಕ.ರ.ಸಾ.ನಿಗಮದ ವತಿಯಿಂದ ಅಹ್ವಾನಿಸಲಾಗುವ ಯಾವುದೇ **<u>ಇ-ಟೆಂಡರ್</u>**ನಲ್ಲಿ ಭಾಗವಹಿಸದಂತೆ ಕಪ್ಪು ಪಟ್ಟಿಗೆ ಸೇರಿಸಲಾಗುವುದು.
4. ಪರವಾನಗಿ ಅವಧಿಯ ಯಾವುದೆ ಸಮಯದಲ್ಲಿ ಮಳಿಗೆಯನ್ನು ಉಪ-ಪರವಾನಗಿಗೆ ನೀಡಿರುವುದು ಕಂಡು ಬಂದಲ್ಲಿ, ಪರವಾನಗಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸಿ, ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗೆಯೇ ಕರಾರು ಒಪ್ಪಂದ ರದ್ದುಪಡಿಸಿದ ದಿನಾಂಕದಿಂದ ಮುಂದಿನ 2 ವರ್ಷಗಳ ಅವಧಿಗೆ ಕ.ಕ.ರ.ಸಾ.ನಿಗಮದ ವತಿಯಿಂದ ಅಹ್ವಾನಿಸಲಾಗುವ ಯಾವುದೇ **<u>ಇ-ಟೆಂಡರ್</u>** ನಲ್ಲಿ ಭಾಗವಹಿಸದಂತೆ ಸದರಿ ಪರವಾನಗಿದಾರರನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು.
5. ಕಪ್ಪು ಪಟ್ಟಿಗೆ ಸೇರಿದ ಪರವಾನಗಿದಾರರು ಸಂಸ್ಥೆಯ ಯಾವುದೇ **<u>ಇ-ಟೆಂಡರ್</u>** ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ **<u>ಇ-ಟೆಂಡರ್</u>**ನಲ್ಲಿ ಭಾಗವಹಿಸಿದಲ್ಲಿ ಅವರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**xviii. ದ್ವಿ-ಚಕ್ರ /ಕಾರ್ ವಾಹನ ನಿಲುಗಡೆ ಶುಲ್ಕ**: ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ದ್ವಿಚಕ್ರ ವಾಹನ ನಿಲ್ದಾಣದ ವ್ಯವಸ್ಥೆ ಕಲ್ಪಿಸಲಾಗಿದ್ದು, ಪರವಾನಗಿದಾರರು ಈ ಕೆಳಕಂಡಂತೆ ನಿಲುಗಡೆ ಶುಲ್ಕ ವಿಧಿಸಬೇಕಿರುತ್ತದೆ.

**ಅ) ಜಿಲ್ಲಾ ಕೇಂದ್ರ ಬಸ್ ನಿಲ್ದಾಣಗಳ ಪಾರ್ಕಿಂಗ್ ದರಗಳು :**

| ವಾಹನದ ವಿಧ | 0-2 | 2-4 | 4-8 | 8-12 | 12-24 | 24 ಗಂಟೆ ಮೇಲ್ಪಟ್ಟು |
|---|---|---|---|---|---|---|
| ಸಮಯ (ಗಂಟೆಗಳಲ್ಲಿ) | ದರ (ರೂ.ಗಳಲ್ಲಿ) | | | | | |
| /ಸ್ಕೂಟರ್ ದ್ವಿಚಕ್ರ ವಾಹನ | 5 | 10 | 15 | 20 | 25 | ಪ್ರತಿ ದಿನಕ್ಕೆ ರೂ. 25/- |
| ಕಾರು | 10 | 20 | 30 | 40 | 50 | ಪ್ರತಿ ದಿನಕ್ಕೆ ರೂ. 50/- |

ಆ) ತಾಲ್ಲೂಕು/ಇತರೆ ಬಸ್ ನಿಲ್ದಾಣಗಳ ಪಾರ್ಕಿಂಗ್ ದರಗಳು:

| ವಾಹನದ ವಿಧ / ಸಮಯ (ಗಂಟೆಗಳಲ್ಲಿ) | 0-2 | 2-4 | 4-8 | 8-12 | 12-24 | 24 ಗಂಟೆ ಮೇಲ್ಪಟ್ಟು |
|---|---|---|---|---|---|---|
| | ದರ (ರೂ.ಗಳಲ್ಲಿ) | | | | | |
| /ಸ್ಕೂಟರ್ ದ್ವಿಚಕ್ರ ವಾಹನ | 5 | 5 | 10 | 15 | 20 | ಪ್ರತಿ ದಿನಕ್ಕೆ ರೂ. 20/- |
| ಕಾರು | 10 | 10 | 20 | 30 | 40 | ಪ್ರತಿ ದಿನಕ್ಕೆ ರೂ. 40/- |

1. ಮೇಲ್ಕಂಡಂತೆ ಪಾರ್ಕಿಂಗ್ ಸ್ಥಳದಲ್ಲಿ ನಿಲುಗಡೆಯಾಗುವ ವಾಹನಗಳಿಗೆ ನಿಗಧಿಪಡಿಸಿರುವ ದರಗಳನ್ನು ಪ್ರಸ್ತುತ ಸಂಸ್ಥೆಯಲ್ಲಿ ಚಾಲ್ತಿಯಲ್ಲಿರುವ ಸುತ್ತೋಲೆ ಸಂ: 550/2019 ದಿನಾಂಕ: 15-10-2019 & 170/2020 ದಿನಾಂಕ:14.12.2020 ರಲ್ಲಿನ ನಿರ್ದೇಶನದಂತೆ ನಿಗದಿಪಡಿಸಲಾಗಿದೆ.
2. ಒಬ್ಬ ಗ್ರಾಹಕರು ಮೂರು (ದ್ವಿಚಕ್ರ ವಾಹನ ನಿಲ್ದಾಣ) ಮೇಲ್ಪಟ್ಟು ನಿರಂತರವಾಗಿ ವಾಹನವನ್ನು ಪಾರ್ಕಿಂಗ್ ಮಾಡಲು ಅವಕಾಶವಿರುವುದಿಲ್ಲ.
3. ಸೈಕಲ್/ಸ್ಕೂಟರ್ ನಿಲ್ದಾಣ (ದ್ವಿಚಕ್ರ ವಾಹನ ನಿಲ್ದಾಣ) ಮತ್ತು ಕಾರು ನಿಲ್ದಾಣದಲ್ಲಿ ವಾಹನಗಳ ನಿಲುಗಡೆಗೆ ನಿಗಧಿಪಡಿಸಿದ ದರಗಳನ್ನು ಮಾತ್ರ ಪಡೆದುಕೊಳ್ಳುವುದು. ಒಂದು ವೇಳೆ ನಿಗಧಿತ ದರಕ್ಕಿಂತ ಹೆಚ್ಚಿನ ದರಗಳನ್ನು ಪರವಾನಗಿದಾರರು ಪಡೆಯುತ್ತಿರುವುದು ಸಂಸ್ಥೆಯ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲ ಪ್ರಕರಣಕ್ಕೆ ರೂ. 2000/- ದಂಡ ವಿಧಿಸುವುದು. ಇದು ಮನರಾವರ್ತನೆಗೊಂಡಲ್ಲಿ ರೂ. 2000/-ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ಸಂಸ್ಥೆಯ ಹೊಂದಿರುತ್ತದೆ.
4. ಬಸ್ ನಿಲ್ದಾಣಗಳಲ್ಲಿ ದ್ವಿಚಕ್ರ ವಾಹನ ನಿಲ್ದಾಣಕ್ಕೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ಇ-ಟೆಂಡರ್ಕರೆಯುವಾಗ, ಅಂಗವಿಕಲರ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳಿಗೆ ನಿಲ್ದಾಣದಲ್ಲಿ ಪಾರ್ಕಿಂಗ್ ಮಾಡಲು ಲಭ್ಯವಿರುವ ಪಾರ್ಕಿಂಗ್ ಸ್ಥಳದಲ್ಲಿ ಶೇಕಡ 2% ರಷ್ಟನ್ನು ಅಂಗವಿಕಲರ ವಾಹನಗಳನ್ನು ಉಚಿತವಾಗಿ ನಿಲ್ಲಿಸಲು ಕಾಯ್ದಿರಿಸುವ ನಿಬಂಧನೆಯನ್ನು ನಿಯಮಾವಳಿಗಳಲ್ಲಿ ಸೇರಿಸಿ, ಇ-ಟೆಂಡರ್ ಕರೆಯಲಾಗಿದ್ದು, ಇದಕ್ಕೆ ಆಯ್ಕೆಯಾಗುವ ಪರವಾನಗಿದಾರರು/ಗುತ್ತಿಗೆದಾರರು ಕಡ್ಡಾಯವಾಗಿ ಪಾಲಿಸತಕ್ಕದ್ದು.
5. ಸ್ಕೂಟರ್/ಕಾರ್ ಪಾರ್ಕಿಂಗ್‌ಗಾಗಿ ಮತ್ತು ಉಪಹಾರ ಗೃಹ ಮಳಿಗೆಗಾಗಿ ಆಯ್ಕೆಯಾಗುವ ಅಭ್ಯರ್ಥಿಗಳಿಗೆ/ಸಂಘ ಸಂಸ್ಥೆಗಳಿಗೆ ತಮ್ಮ ಹೆಸರನ್ನು ಸಹಾಯಕ ಕಾರ್ಮಿಕ ಆಯುಕ್ತರಲ್ಲಿ ನೊಂದಾಯಿಸಿ ಸಲ್ಲಿಸುವುದು ಅಥವಾ ಈ ಸಂಬಂಧ ನೊಂದಾಯಿಸಲು ಧೃಢೀಕರಣ ಪತ್ರವನ್ನು ನೀಡಿ ಹೆಸರನ್ನು / ಸಂಸ್ಥೆಯನ್ನು ನೊಂದಾಯಿಸಿದ ನಂತರವೇ ಪರವಾನಗಿಯನ್ನು ಪಡೆಯಲು ನಮೂನೆ-05 ನ್ನು ಮೇಲೆ ರುಜುವಿನೊಂದಿಗೆ ನೀಡಲಾಗುವುದು.
6. ಸ್ಕೂಟರ್/ಕಾರ್ ಪಾರ್ಕಿಂಗ್‌ಗಳಿಗೆ ಸಂಸ್ಥೆಯು ನಿಗಧಿಪಡಿಸಿರುವ ದರ/ಶುಲ್ಕವನ್ನು ಮಾತ್ರ ಪಡೆಯತಕ್ಕದ್ದು, ಈ ಸಂಬಂಧ ಯಾವುದೇ ದೂರುಗಳು ಬಂದಲ್ಲಿ ಸಂಸ್ಥೆಯ ನಿಯಮಗಳಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
7. ಪಾರ್ಕಿಂಗ್ ಸ್ಟ್ಯಾಂಡ್‌ಗೆ ಆಯ್ಕೆಯಾಗುವ ಪರವಾನಗಿದಾರರು ಎಲ್ಲಾ ವಾಹನಗಳನ್ನು ಕಡ್ಡಾಯವಾಗಿ ಪಾರ್ಕಿಂಗ್ ಸ್ಥಳದಲ್ಲಿಯೇ ನಿಲುಗಡೆಯಾಗುವಂತೆ ನೋಡಿಕೊಳ್ಳುವುದು. ಒಂದು ವೇಳೆ ಪಾರ್ಕಿಂಗ್ ಸ್ಥಳವನ್ನು ಹೊರತುಪಡಿಸಿ ಮೇಲ್ಭಾದಲ್ಲಿ ಪಾರ್ಕಿಂಗ್ ಮಾಡಿರುವುದು ಕಂಡು ಬಂದಲ್ಲಿ ಸಂಸ್ಥೆಯ ನಿಯಮಗಳಂತೆ ಕ್ರಮ ಕೈಗೊಳ್ಳಲಾಗುವುದು. ಅಲ್ಲದೇ ಈ ಕಾರ್ಯಕ್ಕಾಗಿ ಪರವಾನಗಿದಾರರು ನಿಯೋಜಿಸಿಕೊಂಡಿರುವ ಸಿಬ್ಬಂದಿಗಳಿಂದ ಮೇಲ್ಭಾದಲ್ಲಿ ಯಾವುದೇ ಕಾರಣಕ್ಕೂ ವಾಹನಗಳನ್ನು ನಿಲುಗಡೆಯಾಗದಂತೆ ನಿರ್ವಹಣೆ ಮಾಡತಕ್ಕದ್ದು.
8. ಪಾರ್ಕಿಂಗ್ ಸ್ಟ್ಯಾಂಡ್‌ಗೆ ಆಯ್ಕೆಯಾಗುವ ಪರವಾನಗಿದಾರರು ನಿಯೋಜಿಸಿಕೊಳ್ಳುವ ಕೆಲಸಗಾರರಿಗೆ ಕನಿಷ್ಠ ವೇತನ ಕಾಯ್ದೆ ಅನ್ವಯ ಕನಿಷ್ಠ ವೇತನ, ಭವಿಷ್ಯ ನಿಧಿ ಇತ್ಯಾದಿ ಶಾಸನ ಬದ್ಧ ಸೌಲಭ್ಯಗಳನ್ನು ನೀಡತಕ್ಕದ್ದು. ಈ ಕೆಲಸಗಾರರಿಗೆ ಹಾಗೂ ಸಂಸ್ಥೆಗೆ ಯಾವುದೇ ರೀತಿಯ ಸಂಬಂಧವಿರುವುದಿಲ್ಲ. ಪರವಾನಿಗೆದಾರರು ಕೆಲಸಗಾರರಿಗೆ ಚಾಲ್ತಿಯಲ್ಲಿರುವ ಶಾಸನಬದ್ಧವಾದ ಕಾಂಟ್ರ್ಯಾಕ್ಟ ಲೇಬರ (ರೆಗುಲೇಶನ್ & ಎಬೋಲಿಶನ್) ಕನಿಷ್ಠ ವೇತನ ಕಾಯ್ದೆ ಅನ್ವಯ ಕನಿಷ್ಠ ವೇತನ, ಫ್ಯಾಕ್ಟರಿ ಕಾಯ್ದೆ, ಕಾರ್ಮಿಕರ ಭವಿಷ್ಯ ಕಾಯ್ದೆ, ಬೋನಸ್ ಕಾಯ್ದೆ, ಗ್ರ್ಯಾಚ್ಯೂಟಿ ಕಾಯ್ದೆ, ಏಕರೂಪ ರೆಮುನೆರೇಶನ್ ಕಾಯ್ದೆ, ಇಎಸ್‌ಐ ಕಾಯ್ದೆ, ಕೈಗಾರಿಕಾ ವಿವಾದಗಳ ಕಾಯ್ದೆ, ಬಾಲ ಕಾರ್ಮಿಕರ ನೇಮಕ ನಿಷೇಧ ಕಾಯ್ದೆ, ಮೋಟಾರು ಕಾಯ್ದೆ ಮತ್ತು ಉದ್ಯೋಗ ಹಾಗೂ ಅದರ ನಿಯಮಾವಳಿ ಕಾಯ್ದೆಯನ್ವಯ ಕಾರ್ಮಿಕ ಸೌಲಭ್ಯ ನೀಡತಕ್ಕದ್ದು. ಅಲ್ಲದೇ ಆಯ್ಕೆಯಾಗುವ ಪರವಾನಗಿದಾರರು ತಮ್ಮ ಸಿಬ್ಬಂದಿಗಳಿಗೆ ಕನಿಷ್ಠ ವೇತನ ಕಾಯ್ದೆಯನ್ವಯ ನೀಡುವ ವೇತನ, ಪಿ.ಎಫ್., ಹಾಗೂ ಇತರೆ ಸೌಲಭ್ಯಗಳ ಕುರಿತು ಪ್ರತಿ ತಿಂಗಳು ದಾಖಲೆಗಳನ್ನು ವಿಭಾಗೀಯ ಕಚೇರಿಯಲ್ಲಿ ತಪ್ಪದೇ ಸಲ್ಲಿಸತಕ್ಕದ್ದು. ಈ ಸಂಬಂಧ ಪರವನಗಿದಾರರು ಕ್ರಮ ಕೈಗೊಳ್ಳಲು ವಿಫಲರಾಗಿದ್ದಲ್ಲಿ ಅಥವಾ ಸಂಬಂಧಪಟ್ಟ ಸರ್ಕಾರದ ಕಾರ್ಮಿಕ ಅಧಿಕಾರಿಗಳು ಪರಿಶೀಲಿಸಿ ವರದಿಯನ್ನು ಸಲ್ಲಿಸಿದ್ದಲ್ಲಿ ಅದಕ್ಕೆ ಸಂಪೂರ್ಣವಾಗಿ ಆಯ್ಕೆಯಾಗಿರುವ ಪರವಾನಗಿದಾರರಿಗೆ ಜವಾಬ್ದಾರರಾಗಿದ್ದು ಅವರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.
9. ಪಾರ್ಕಿಂಗ್ ಕಾರ್ಯಕ್ಕಾಗಿ ಆಯ್ಕೆಯಾಗುವ ಪರವಾನಿಗೆದಾರರು ಪಾರ್ಕಿಂಗ್ ಸ್ಥಳದಲ್ಲಿ ವಾಹನಗಳು ಒಳಬರುವ ಮತ್ತು ಹೊರಹೋಗುವ ಸಮಯವನ್ನು ದಾಖಲಿಸುವ ಪಾರ್ಕಿಂಗ್ ಮೀಟರ್‌ನ್ನು ಪರವಾನಗಿದಾರರು ಕಡ್ಡಾಯವಾಗಿ ಬಳಸುವುದು.
10. ದ್ವಿಚಕ್ರ/ಕಾರು ನಿಲುಗಡೆ ಪರವಾನಗಿದಾರರು ವಾಹನಗಳ ನಿಲುಗಡೆಯ ದರಗಳ ಪಟ್ಟಿಯನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು.

11. **ಒಂದು ಪರವಾನಗಿದಾರರು ವಾಹನಗಳ ನಿಲುಗಡೆ ಸಂಸ್ಥೆಯು ನಿಗಧಿಪಡಿಸಿರುವ ದರಗಳಿಗಿಂತ ಹೆಚ್ಚಿನ ಹಣ ಪಡೆಯುತ್ತಿರುವುದು ಸಂಸ್ಥೆಯ ಗಮನಕ್ಕೆ ಬಂದಲ್ಲಿ ಕೆಳಕಂಡ ದಂಡದ ಮೊತ್ತವನ್ನು ವಿಧಿಸಲಾಗುವುದು.**

| ಕ್ರಮ ಸಂಖ್ಯೆ | ಪ್ರಕರಣಗಳು (ಪ್ರತಿ ತಿಂಗಳಿಗೆ) | ದಂಡದ ಮೊತ್ತ ರೂ. ಗಳಲ್ಲಿ |
|---|---|---|
| 1 | ಮೊದಲ ಐದು (05) ಪ್ರಕರಣಗಳಿಗೆ | ತಲಾ ರೂ. 500/- |
| 2 | ನಂತರ ಐದು (05) ಪ್ರಕರಣಗಳಿಗೆ | ತಲಾ ರೂ. 1,000/- |
| 3 | ತದನಂತರದ ಪ್ರಕರಣಗಳು ದಾಖಲಾದಲ್ಲಿ | ಕರಾರನ್ನು ರದ್ಧುಪಡಿಸುವುದು ಹಾಗೂ ಪರವಾನಗಿದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು. |

**ಇನ್ನಿತರ ವಾಣಿಜ್ಯ ಮಳಿಗೆಗಳಿಗೆ ಅನ್ವಯಿಸುವ ನಿಯಮ/ನಿಬಂಧನೆಗಳು ಈ ಪರವಾನಿಗೆದಾರರಿಗೂ ಅನ್ವಯವಾಗುತ್ತವೆ.**

**XIX. ಲಗೇಜ್/ಕ್ಲೋಕ್ ರೂಂ ದರಗಳು:** ಬಸ್ ನಿಲ್ದಾಣಗಳಲ್ಲಿ ಗುರ್ತಿಸಿರುವ ಲಗೇಜ್/ಕ್ಲೋಕ್ ರೂಂಗಳಿಗೆ ಈ ಕೆಳಕಂಡಂತೆ ಗ್ರಾಹಕರಿಂದ ದರಗಳನ್ನು ವಿಧಿಸುವ ನಿಬಂಧನೆಗೊಳಪಟ್ಟು ಪರವಾನಿಗೆದಾರರನ್ನು ಆಯ್ಕೆ ಮಾಡಬೇಕಿರುತ್ತದೆ.

1. **ಸಾರ್ವಜನಿಕ ಪ್ರಯಾಣಿಕರ ವಸ್ತುಗಳನ್ನು ಸುರಕ್ಷಿತವಾಗಿ ಲಗೇಜ್/ಕ್ಲೋಕ್ ರೂಂ ಗಳಲ್ಲಿ ಇಡಬಹುದಾಗಿದೆ.**
2. **ಈ ಸಂಬಂಧ ಪರವಾನಗಿದಾರರು ರಸೀದಿಯನ್ನು ಪ್ರಯಾಣಿಕರಿಗೆ ನೀಡಬೇಕಿರುತ್ತದೆ.**
3. **ಸರಿಯಾಗಿ ಪ್ಯಾಕ್ ಮಾಡದ ವಸ್ತುಗಳು/ಲಾಕ್ ಮಾಡದ ಟ್ರಂಕ್/ಸೂಟ್ ಕೇಸಗಳು, ಕೆಟ್ಟು ಹೋಗುವ ವಸ್ತುಗಳಾದ ತರಕಾರಿ, ಮೀನು, ಮಾಂಸ, ಸ್ಫೋಟಕ ವಸ್ತುಗಳು, ಜ್ವಾಲೆ ಎಬ್ಬಿಸುವ ವಸ್ತುಗಳು, ನಿಷೇಧಿತ ವಸ್ತುಗಳು ಹಾಗೂ ಪ್ರಾಣಿಗಳಾದ ನಾಯಿ, ಮೊಲ ಇತ್ಯಾದಿಗಳನ್ನು ಕ್ಲೋಕ್ ರೂಂನಲ್ಲಿ ಪಡೆಯುವಂತಿಲ್ಲ.**
4. **ಕ್ಲೊಕ್ ರೂಂ/ಲಗೇಜ್ ರೂಂನ ಪರವಾನಗಿದಾರರು ಅಗತ್ಯ ದಾಖಲಾತಿಯನ್ನು ನಿರ್ವಹಿಸಿ, ವಸ್ತುಗಳನ್ನು ಠೇವಣಿ ಇಡುವವರ ವಿವರಗಳನ್ನು ದಾಖಲಿಸುವುದು, ಸಂಸ್ಥೆಯ ಅಧಿಕಾರಿಗಳು/ಬಸ್ ನಿಲ್ದಾಣದ ಅಧಿಕರಿಗಳು ಕೇಳಿದಲ್ಲಿ, ಸದರಿ ದಾಖಲಾತಿಯನ್ನು ತೋರಿಸತಕ್ಕದ್ದು.**
5. **ನಗರದ ಬಸ್ ನಿಲ್ದಾಣಗಳಲ್ಲಿ ಕ್ಲೋಕ್ ರೂಂ/ಲಗೇಜ್ ರೂಂನಲ್ಲಿ ಪರವಾನಗಿದಾರರು ಗ್ರಾಹಕರಿಂದ ಪಡೆಯಬೇಕಿರುವ ದರಗಳ ವಿವರಗಳು ಈ ಕೆಳಕಂಡಂತಿವೆ.**
6. **ಕೊಪ್ಪಳ ಕೇಂದ್ರ ಬಸ್ ನಿಲ್ದಾಣದಲ್ಲಿನ ಕ್ಲೋಕ್ ರೂಂ / ಲಗೇಜ್ ರೂಂನಲ್ಲಿ ಪರವಾನಗಿದಾರರು ಗ್ರಾಹಕರಿಂದ ಪಡೆಯಬೇಕಿರುವ ದರಗಳ ವಿವರಗಳು ಈ ಕೆಳಗಿನಂತಿವೆ.**

| ಕ್ರ. ಸಂ | ವಿವರಗಳು | ಪ್ರಸ್ತುತ ದರ | | ಪರಿಷ್ಕೃತ ದರ | |
|---|---|---|---|---|---|
| | | ಪ್ಯಾಕೇಜ್‌ಗೆ (ರೂ.) | ಲಾಕರ್ ವ್ಯವಸ್ಥೆಗೆ (ರೂ.) | ಪ್ಯಾಕೇಜ್‌ಗೆ (ರೂ.) | ಲಾಕರ್ ವ್ಯವಸ್ಥೆಗೆ (ರೂ.) |
| 1 | 30 ಕೆ.ಜಿ.ವರೆಗೆ, 12 ಗಂಟೆಗಳ ಅವಧಿಗೆ (ಸೂಟಕೇಸ್, ಟ್ರಂಕ್, ಹಾಸಿಗೆ ಇತ್ಯಾದಿ) | 2/- | 5/- | 5/- | 10/- |
| 2 | ಮುಂದಿನ 12 ಗಂಟೆಗಳು ಅಥವಾ ಭಾಗಶಃ ಅವಧಿಗೆ | 3/- | 6/- | 10/- | 15/- |
| 3 | ನಂತರದ ಪ್ರತಿ 12 ಗಂಟೆಗಳಿಗೆ | 5/- | 8/- | 15/- | 20/- |

7. ಮೂವತ್ತು (30) ಕೆ.ಜಿ.ವರೆಗೆ ಪ್ಯಾಕೇಜಗಳನ್ನು ಮಾತ್ರ ಸುರಕ್ಷಿತವಾಗಿಡಲು ಪರವಾನಗಿದಾರರು ಪಡೆಯಬೇಕು.
8. ಠೇವಣಿ ಇರಿಸಿರುವ ವಸ್ತುಗಳು 15 ದಿನಗಳ ಅವಧಿಯಲ್ಲಿ ವಾಪಸ್ ಪಡೆಯದಿದ್ದಲ್ಲಿ, ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ ಬಸ್ ನಿಲ್ದಾಣದ ಅಧಿಕಾರಿಯವರ / ಸಂಬಂದಿಸಿದ ಘಟಕ ವ್ಯವಸ್ಥಾಪಕರ ವಶಕ್ಕೆ ನೀಡುವುದು. ಸದರಿ ವಸ್ತುಗಳನ್ನು ವಿಭಾಗೀಯ ಭದ್ರತಾ ನಿರೀಕ್ಷಕರವರ ಸಮ್ಮುಖದಲ್ಲಿ ತೆರೆದು, ಎಂ.ವಿ,ಕಾಯ್ದೆಯ-1989 ರ ಸೆಕ್ಷನ್ 106 ರ ಪ್ರಕಾರವಾಗಿ ವಿಲೇವಾರಿ ಮಾಡುವುದು.
9. ಪರವಾನಗಿದಾರರು ಠೇವಣಿ ಇರಿಸುವ ವಸ್ತುಗಳಿಗೆ ಬೆಂಕಿ ತಗುಲದಂತೆ ಅಗ್ನಿರಕ್ಷಕ ಉಪಕರಣಗಳ ವ್ಯವಸ್ಥೆ ಮಾಡಿಕೊಳ್ಳುವುದು.
10. ವಿಭಾಗೀಯ ಕೇಂದ್ರ ಸ್ಥಳಗಳಲ್ಲಿರುವ ಬಸ್ ನಿಲ್ದಾಣದಲ್ಲಿನ ಪರವಾನಗಿದಾರರು ಲಗ್ಗೇಜ್ / ಕ್ಲೋಕ್ ರೂಂ ಗಳನ್ನು ದಿನಪೂರ್ತಿ, ಅಂದರೆ ಸದರಿ ಬಸ್ ನಿಲ್ದಾಣದಲ್ಲಿ ಮೊದಲ ಅನುಸೂಚಿ ಆಚರಣೆಯ 30 ನಿಮಿಷಗಳ ಮುಂಚಿತವಾಗಿ ಹಾಗೂ ಕೊನೆಯ ಅನುಸೂಚಿ ಆಚರಣೆಯ 30 ನಿಮಿಷದ ನಂತರದ ಸಮಯದವರೆಗೆ ತೆರೆದಿಡತಕ್ಕದ್ದು.
11. ಕ್ಲೋಕ್ ರೂಂನಲ್ಲಿ ಠೇವಣಿ ಇಡಬಹುದಾದ / ನಿಷೇಧಿತ ವಸ್ತುಗಳು, ದರಗಳು ವಸ್ತುಗಳ ತೂಕ ಇತ್ಯಾದಿ ವಿವರಗಳನ್ನು, ಕ್ಲೋಕ್ ರೂಂ ಮುಂದುಗಡೆ ಸಾರ್ವಜನಿಕ ಪ್ರಯಾಣಿಕರು ವೀಕ್ಷಿಸಲು ಪ್ರದರ್ಶಿಸತಕ್ಕದ್ದು.

12. ಪ್ರಯಾಣಿಕರು ಠೇವಣಿ ಇಡುವ ವಸ್ತುಗಳಿಗೆ ಪರವಾನಿಗೆದಾರರು ಜವಾಬ್ದಾರಿಯಾಗಿದ್ದು, ಠೇವಣಿ ಇಡುವ ವಸ್ತುಗಳು ಕಳವು/ಹಾನಿಗೊಂಡಲ್ಲಿ, ರೂ. 1000.00 ರವರೆಗೆ ಪರಿಹಾರ ನೀಡುವುದಾಗಿ ಗ್ರಾಹಕರಿಗೆ ನೀಡುವ ರಸೀದಿಯಲ್ಲಿ ಮುದ್ರಿಸುವುದು ಹಾಗೂ ಅದರಂತೆ ಕ್ರಮ ವಹಿಸುವುದು.
13. ಪರವಾನಗಿದಾರರು ನಿಗದಿಪಡಿಸಿದ ದರಗಳನ್ನು ಮಾತ್ರ ಪಡೆದುಕೊಳ್ಳುವುದು. ಒಂದು ವೇಳೆ ನಿಗದಿತ ದರಕ್ಕಿಂತ ಹೆಚ್ಚಿನ ದರಗಳನ್ನು ಪರವಾನಗಿದಾರರು ಪಡೆಯುತ್ತಿರುವುದು ಸಂಸ್ಥೆಯ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲ ಪ್ರಕರಣಕ್ಕೆ ರೂ. 500.00, 2ನೇ ಪ್ರಕರಣಕ್ಕೆ ರೂ. 1000.00 ಮತ್ತು 3ನೇ ಪ್ರಕರಣಕ್ಕೆ ರೂ. 2000.00 ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
14. ಇತರೆ ಮಳಿಗೆಗಳ ಪರವಾನಗಿದಾರರಿಗೆ ಅನ್ವಯವಾಗುವ ನಿಯಮ / ನಿಬಂಧನೆಗಳು ಈ ಮಳಿಗೆಯ ಪರವಾನಗಿದಾರರಿಗೂ ಅನ್ವಯವಾಗಲಿದೆ.

XX. **ವಾಣಿಜ್ಯ ಮಳಿಗೆಗಳ ವ್ಯವಹಾರ ನಿಗಧಿಪಡಿಸುವಿಕೆ :**

1. ಉಪಹಾರ ಗೃಹ, ಚಾಟ್ ಸೆಂಟರ್, ಮಿಲ್ಕ ಪಾರ್ಲರ್, ಹಣ್ಣಿನ ಮಳಿಗೆ, ಲಗೇಜ್/ಕ್ಲೋಕ್ ರೂಂ, ಕಛೇರಿ ಸ್ಥಳಾವಕಾಶ, ದ್ವಿಚಕ್ರ/ಕಾರು ಪಾಕಿಂಗ್, ದೂರವಾಣಿ/ಕಾಯಿನ್ ಬೂತ್, ಎ.ಟಿ.ಎಂ. ಕೌಂಟರ್, ಲಾಡ್ಜಿಂಗ್ ಮತ್ತು ಡಾರ್ಮಿಟರಿ, ನಾಣ್ಯ ಚಾಲಿತ ಮಾನವ ತೂಕದ ಯಂತ್ರ, ಔಷಧಿ ಮಳಿಗೆ, ಸರ್ಕಾರಿ ಮತ್ತು ಅರೆ-ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮಳಿಗೆಗಳನ್ನು ಹೊರತುಪಡಿಸಿ, ಇನ್ನಿತರೆ ಮಳಿಗೆಗಳಿಗೆ "ಜನರಲ್ ಸ್ಟಾಲ್ " ಎಂದು ವ್ಯವಹಾರವನ್ನು ನಿಗಧಿಪಡಿಸಲಾಗಿದೆ.
2. ಪರವಾನಗಿ ಪಡೆದ ಮಳಿಗೆಗಳಲ್ಲಿ ಟೆಂಡರನಲ್ಲಿ ನಿಗದಿಪಡಿಸಿದ ವ್ಯವಹಾರವನ್ನು ಹೊರತುಪಡಿಸಿ ಇತರೆ ವ್ಯವಹಾರವನ್ನು ನಡೆಸಲು ಅವಕಾಶವಿರುವುದಿಲ್ಲ.
3. ಜನರಲ್ ಸ್ಟಾಲ್‌ಗಳಿಗೆ ಆಯ್ಕೆಯಾದ ಪರವಾನಿಗೆದಾರರು, ಈ ಕೆಳಗಿನ ಪಟ್ಟಿಯಲ್ಲಿ ನಮೂದಿಸಿದ ವಸ್ತು/ಪದಾರ್ಥಗಳನ್ನು ಮಾರಾಟ ಮಾಡಬೇಕಿರುತ್ತದೆ. ಮಾರಾಟ ಮಾಡಲು ನಿಷೇಧಿಸಿದ ವಸ್ತು/ಪದಾರ್ಥಗಳನ್ನು ಮಾರಾಟ ಮಾಡುವಂತಿಲ್ಲ. **ಸದರಿ ಪಟ್ಟಿಯ ಹೊರತಾಗಿ ಇರುವ ವಸ್ತುಗಳನ್ನು ಮಾರಾಟ ಮಾಡಬೇಕಿದ್ದಲ್ಲಿ, ಪರವಾನಿಗೆದಾರರು ಕರಾರಿಗೂ ಮುಂಚಿತವಾಗಿ ಸಂಸ್ಥೆಯಿಂದ ಪೂರ್ವಾನುಮತಿ ಪಡೆಯಬೇಕಿರುತ್ತದೆ**. ವಿಭಾಗದ ಅಧಿಕಾರಿಗಳು ಅನುಮತಿ ನೀಡುವ ಮುನ್ನ, ಸದರಿ ವಸ್ತುಗಳ ಮಾರಾಟದಿಂದ ಇತರೆ ಮಳಿಗೆಗಳ ವ್ಯವಹಾರಕ್ಕೆ ನಷ್ಟ ಆಗುವುದಿಲ್ಲ. ಎಂಬುದನ್ನು ದೃಡೀಕರಿಸಿಕೊಳ್ಳಬೇಕು.

| **ಜನರಲ್ ಮಳಿಗೆಯಲ್ಲಿ ಮಾರಾಟ ಮಾಡಬಹುದಾದ ವಸ್ತು/ಪದಾರ್ಥಗಳು** | **ಜನರಲ್ ಮಳಿಗೆಯಲ್ಲಿ ಮಾರಾಟ ಮಾಡಲು ನಿಷೇದಿಸಿರುವ ವಸ್ತು/ಪದಾರ್ಥಗಳು** |
|---|---|
| ಪುಸ್ತಕ/ದಿನಪತ್ರಿಕೆ/ನಿಯತಕಾಲಿಕೆಗಳು & ಸ್ಟೇಷನರಿ ವಸ್ತುಗಳು, ಮಾರ್ಜಕ/ಸಾಬೂನುಗಳು,ಹಣ್ಣು/ಹೂಗಳು, ಜೆರಾಕ್ಸ್,ಪ್ಯಾಕ್ ಆಗಿರುವ ಬಿಸ್ಕೆಟ್ಸ್ /ಜ್ಯೂಸ್,ಬೇಕರಿ ತಿನಿಸುಗಳು,ನೀರಿನ ಬಾಟಲ್,ಮೊಬೈಲ್ ಕರೆನ್ಸಿ, ಸೌಂದರ್ಯ ವರ್ಧಕಗಳು,ಅಲಂಕಾರಿಕ ವಸ್ತುಗಳು, ಕೊಡುಗೆ ನೀಡುವ ವಸ್ತುಗಳು ಫ್ಯಾನ್ಸಿ ಸ್ಟೋರನಲ್ಲಿ ಮಾರಾಟ ಮಾಡುವ ವಸ್ತುಗಳು. **ಈ ಮಳಿಗೆಗಳಲ್ಲಿ ಗ್ಯಾಸ್/ಸ್ಟೌವ್ ಬಳಕೆಗೆ ಅವಕಾಶವಿಲ್ಲ**. | ಬೇಯಿಸಿದ ಪದಾರ್ಥಗಳಾದ ಕಾಫಿ, ಟೀ, ಉಪಹಾರ, ಊಟ, ಹಾಲು ಇತ್ಯಾಧಿಗಳು, ಔಷಧಿಗಳು, ದೂರವಾಣಿ ಬೂತ್ ನಾಣ್ಯ ಚಾಲಿತ ಮಾನವ ತೂಕದ ಯಂತ್ರ, ಕಾನೂನು ಬಾಹಿರವಾಗಿರುವ ಪಟಾಕಿ, ಗನ್ನುಗಳು, ಸಿಡಿಮದ್ದುಗಳು, ತಂಬಾಕುಯುಕ್ತ ಪದಾರ್ಥಗಳು, ಮದ್ಯದ ಮಾರಾಟ, ಸೀಮೆ ಎಣ್ಣೆ, ಡೀಸೇಲ್, ಪೆಟ್ರೋಲ್ & ಗ್ಯಾಸ್, ಗ್ಯಾಸ್ ಸಿಲಿಂಡರ್, ಟ್ರಾವೆಲ್/ಟ್ರಾನ್ಸಪೋರ್ಟ ಏಜೆನಸಿ, ಟಿಕೇಟ ಬುಕ್ಕಿಂಗ, ಇತ್ಯಾಧಿ ಕಾನೂನು ಮತ್ತು ಸಂಸ್ಥೆಯ ವತಿಯಿಂದ ನಿಷೇದಿಸಲ್ಪಟ್ಟ ಹಾಗೂ ಮುಂದೆ ನಿಷೇದಿಸಲ್ಪಡುವ ವಸ್ತುಗಳು. |

**XXI. ಔಷಧಿ ಮಳಿಗೆಗಳಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡುವ ಬಗ್ಗೆ:** ಔಷಧಿ ಮಳಿಗೆಗಳಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ಆಹ್ವಾನಿಸಲಾಗುವ ಟೆಂಡರನಲ್ಲಿ ಭಾಗವಹಿಸುವ ಅರ್ಜಿದಾರರು ಔಷದಿ ಮಳಿಗೆ ನಡೆಸಲು ಅವಶ್ಯವಿರುವ ಫಾರ್ಮಸಿ ವಿದ್ಯಾರ್ಹತೆಯನ್ನು (D.Pharma/ B.Pharma) ಮತ್ತು ಔಷದ ನಿಯಂತ್ರಣ ಪ್ರಾಧಿಕಾರದಿಂದ ಔಷದಿಗಳನ್ನು ಮಾರಾಟ ಮಾಡಲು ಅನುಮತಿ ಪಡೆದಿರುವ ಪ್ರಮಾಣ ಪತ್ರವನ್ನು (Drugs Sales Registration Certification from Drug Control Authority) ಕಡ್ಡಾಯವಾಗಿ ಹೊಂದಿರಬೇಕು ಮತ್ತು ದಾಖಲೆಗಳ ಪ್ರತಿಗಳನ್ನು ಇ-ಪೋರ್ಟಲ್ ನಲ್ಲಿ ಅಪ್ ಲೋಡ್ ಮಾಡಬೇಕು.

**1)** ಕರಾರು ಒಪ್ಪಂದ ಮುಕ್ತಾಯವಾದ ಬಳಿಕ ಮಳಿಗೆ/ಸ್ಟ್ರಕ್ಚರ್ ತೆರವುಗೊಳಿಸಲು ತಡ ಮಾಡಿದಲ್ಲಿ ಈ ಕೆಳಗಿನಂತೆ ದಂಡವನ್ನು ವಿಧಿಸಲು ಕ್ರಮ ಕೈಗೊಳ್ಳಲಾಗುವುದು.

1) ಪರವಾನಿಗೆದಾರರು ಕರಾರಿನ ಅವಧಿ ಮುಕ್ತಾಯದ ದಿನ ಮಳಿಗೆಯನ್ನು/ತೆರೆದ ಸ್ಥಳಗಳಲ್ಲಿ ಸ್ಟ್ರಕ್ಚರ್‌ಗಳೊಂದಿಗೆ ಖಾಲಿ ಮಾಡಬೇಕು. ಕರಾರಿನ ಮುಕ್ತಾಯ ದಿನಾಂಕದ ನಂತರ ಮಳಿಗೆಯಲ್ಲಿ ವ್ಯವಹಾರವನ್ನು ನಡೆಸುವಂತಿಲ್ಲ.

2) ಒಂದು ವೇಳೆ ಮಳಿಗೆಯನ್ನು ತೆರವುಗೊಳಿಸಲು ವಿಳಂಬ ಮಾಡಿದಲ್ಲಿ, ಕೆಳಕಂಡಂತೆ ದಂಡ ವಿಧಿಸಲು ಕ್ರಮ ವಹಿಸಲಾಗುವುದು.

| ಕ್ರಮ ಸಂ. | ವಿಳಂಬದ ದಿನಗಳು | ವಿಧಿಸಬೇಕಾದ ದಂಡದ ಮೊತ್ತ ಶೇ.ವಾರು |
|---|---|---|
| 1 | ಮಳಿಗೆಯನ್ನು ತೆರವುಗೊಳಿಸಲು 07 ದಿನಗಳವರೆಗಿನ ವಿಳಂಬಕ್ಕೆ | ಕೊನೆಯ ತಿಂಗಳ ಪರವಾನಗಿ ಶುಲ್ಕದ ಶೆ.25 ರಷ್ಟು ದಂಡ ಮತ್ತು ಅನ್ವಯಿಸುವ ತೆರಿಗೆಗಳನ್ನು ವಿಧಿಸಲಾಗುವುದು |
| 2 | ಮಳಿಗೆಯನ್ನು ತೆರವುಗೊಳಿಸಲು 07 ದಿನಗಳ ಮೇಲ್ಪಟ್ಟು, 15 ದಿನಗಳ ವರೆಗಿನ ವಿಳಂಬಕ್ಕೆ | ಕೊನೆಯ ತಿಂಗಳ ಪರವಾನಗಿ ಶುಲ್ಕದ ಶೆ.50 ರಷ್ಟು ದಂಡ ಮತ್ತು ಅನ್ವಯಿಸುವ ತೆರಿಗೆಗಳನ್ನು ವಿಧಿಸಲಾಗುವುದು |
| 3 | ಮಳಿಗೆಯನ್ನು ತೆರವುಗೊಳಿಸಲು 15 ದಿನಗಳ ಮೇಲ್ಪಟ್ಟು, ಒಂದು ತಿಂಗಳವರೆಗಿನ ವಿಳಂಬಕ್ಕೆ | ಕೊನೆಯ ತಿಂಗಳ ಪರವಾನಗಿ ಶುಲ್ಕದಷ್ಟು ದಂಡ ಮತ್ತು ಅನ್ವಯಿಸುವ ತೆರಿಗೆಗಳನ್ನು ವಿಧಿಸಲಾಗುವುದು |

4) ಪರವಾನಗಿದಾರರು ಒಂದು ತಿಂಗಳೊಳಗಾಗಿ ಮಳಿಗೆಯಲ್ಲಿನ ವಸ್ತುಗಳನ್ನು ಹಾಗೂ ತೆರೆದ ಸ್ಥಳಗಳಲ್ಲಿ ಸ್ಟ್ರಕ್ಚರ್‌ನ್ನು ತೆರೆಯಲು ವಿಫಲರಾದಲ್ಲಿ.ಅವುಗಳನ್ನು ಮುಟ್ಟುಗೋಲು ಹಾಕಿ ಕೊಂಡು ಪರವಾನಗಿದಾರರ ಖರ್ಚಿನಲ್ಲಿ ತೆರವುಗೊಳಿಸಲು/ವಿಲೇವಾರಿ ಮಾಡಲು ಸಂಸ್ಥೆಯ ವತಿಯಿಂದ ಕ್ರಮ ಕೈಗೊಳ್ಳಲಾಗುವುದು.

5) ಮಳಿಗೆಯಲ್ಲಿನ ವಸ್ತುಗಳನ್ನು ಮತ್ತು ತೆರೆದ ಸ್ಥಳಗಳ ಮಳಿಗೆಗಳ ಸ್ಟ್ರಕ್ಚರ್‌ನ್ನು ತೆರವುಗೊಳಿಸಿದ ನಂತರವೇ ಸಂಸ್ಥೆಗೆ ಬರಬೇಕಾದ ಬಾಕಿ ಮೊತ್ತವನ್ನು ಹೊಂದಾಣಿಕೆ ಮಾಡಿಕೊಂಡ ನಂತರ ಭದ್ರತಾ ಠೇವಣಿ ಮೊತ್ತವನ್ನು ಹಿಂದಿರುಗಿಸಲು ಕ್ರಮ ಕೈಗೊಳ್ಳಲಾಗುವುದು.

6) ಪರವಾನಿಗೆದಾರರು ಅವಧಿ ಮುಕ್ತಾಯದ ದಿನದಂದು ಖಾಲಿ ಮಾಡಿರುವುದನ್ನು ಖಚಿಪಡಿಸಿಕೋಂಡ ನಂತರವೇ ಭದ್ರತಾ ಠೇವಣಿ ಮೊತ್ತವನ್ನು ಹಿಂದಿರುಗಿಸಲಾಗುವುದು.

## XXII. ಇ.ಎಂ.ಡಿ./ಭದ್ರತಾ ಠೇವಣಿ ಮೊತ್ತ ಮುಟ್ಟುಗೋಲು ಹಾಕಿಕೊಳ್ಳಲಾಗುವ/ಹಿಂದಿರುಗಿಸುವ ಸಂಧರ್ಭಗಳು:(Forfeiture and refund of EMD / Secuirty Deposit) :

1. **<u>ಇ-ಟೆಂಡರ್</u>**ನಲ್ಲಿ ಆಯ್ಕೆಯಾಗದ ಬಿಡ್‌ದಾರರುಗಳ (H1 & H2 ಹೊರತುಪಡಿಸಿ) ಇ.ಎಂ.ಡಿ ಮೊತ್ತವನ್ನು **<u>ಇ-ಟೆಂಡರ್</u>**ಅಂತಿಮಗೊಂಡ ನಂತರ ಹಿಂದಿರುಗಿಸುವುದು. H2 ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು H1 ಬಿಡ್‌ದಾರರ ಕರಾರು ಒಪ್ಪಂದ ಮಾಡಿಕೊಂಡ ನಂತರ ಹಿಂದಿರುಗಿಸಲಾಗುವುದು.
2. **<u>ಇ-ಟೆಂಡರ್</u>**ನಲ್ಲಿ ಅತಿ ಹೆಚ್ಚು ಮೊತ್ತವನ್ನು ಬಿಡ್ ಮಾಡಿ ಪರವಾನಗಿದಾರರಾಗಿ ಅಯ್ಕೆಯಾದ ಬಿಡ್‌ದಾರರು ನಿಗದಿತ ದಿನಾಂಕದೊಳಗಾಗಿ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಲು ವಿಫಲರಾದಲ್ಲಿ ಅಂತಹ ಬಿಡ್‌ದಾರರ ಇ.ಎಂ.ಡಿ ಮೊತ್ತವನ್ನು ಸಂಸ್ಥೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
3. ಒಂದು ವೇಳೆ ಆಯ್ಕೆಯಾದ ಬಿಡ್‌ದಾರರು ಭದ್ರತಾ ಠೇವಣಿ ಮತ್ತು ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಿ, ನಿಗದಿತ ದಿನಾಂಕದೊಳಗಾಗಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಭದ್ರತಾ ಠೇವಣಿ ಹಾಗೂ ಮುಂಗಡ ಮಾಡಿದ ಪರವಾನಗಿ ಶುಲ್ಕಗಳನ್ನು ಸಂಸ್ಥೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
4. **<u>H2 ಬಿಡ್‌ದಾರರನ್ನು ಪರವಾನಗಿದಾರರಾಗಿ ಆಯ್ಕೆ ಮಾಡಿದಾಗ, ಅವರು ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು & ಮುಂದಿನ ಎರಡು ವರ್ಷದ ಅವಧಿಗೆ ಕಪ್ಪು ಪಟ್ಟಿಗೆ ಸೇರಿಸಲಾಗುವುದು.</u>**
5. **<u>ಎರಡು ವರ್ಷದೊಳಗಡೆ ಪರವಾನಿಗೆ ರದ್ದತಿ ಮಾಡಿಕೊಳ್ಳುವ ಪರವಾನಗಿದಾರರ ಭದ್ರತಾ ಠೇವಣಿ ಮೊತ್ತವನ್ನು ಪೂರ್ಣವಾಗಿ ಮುಟ್ಟುಗೋಲು ಹಾಕಿಕೊಳ್ಳಲು ಹಾಗೂ ಕಪ್ಪು ಪಟ್ಟಿಗೆ ಸೇರಿಸಲಾಗುವುದು.</u>**
6. ಭದ್ರತಾ ಠೇವಣಿ/ಇ.ಎಂ.ಡಿ. ಬಾಬ್ತಿಗೆ ನೀಡಿರುವ ರಶೀದಿಗಳು ಕಳೆದು ಹೋದಂತಹ ಪ್ರಕರಣಗಳಲ್ಲಿ, ಪರವಾನಗಿದಾರರು/ ಬಿಡ್‌ದಾರರಿಂದ ಸಂಸ್ಥೆಯ ಪರವಾಗಿ "ಇಂಡೆಮ್ನಿಟಿ ಬಾಂಡ್ (Indemnity bond) ನ್ನು ಪಡೆದು ಭದ್ರತಾ ಠೇವಣಿ/ಇ.ಎಂ.ಡಿ ಬಾಬ್ತಿನ ಮೊತ್ತಕ್ಕೆ ಚೆಕ್‌ನ್ನು ಪರವಾನಗಿದಾರರ/ಬಿಡ್‌ದಾರರ ಹೆಸರಿನಲ್ಲಿ ನೀಡಲಾಗುವುದು.

## XXIII. ಇತರೆ ಸಾಮಾನ್ಯ ಷರತ್ತು ಮತ್ತು ನಿಬಂಧನೆಗಳು:

1. ಮಾಸಿಕ ಶುಲ್ಕವನ್ನು ಹೊರತು ಪಡಿಸಿ ಬಿಡ್ಡುದಾರರು ಬೇಡಿಕೆ ಸಲ್ಲಿಸುವುದು ಹಾಗೂ ಸಲ್ಲಿಸಿದ ಬೇಡಿಕೆ ಮೊತ್ತಕ್ಕೆ ಸರಕು ಮತ್ತು ಸೇವಾ ತೆರಿಗೆ ನಿಗಧಿ ಪಡಿಸಲಾಗುವುದು.
2. ಮಳಿಗೆಗಳಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡುವ ಹಾಗೂ ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿರುತ್ತದೆ.
3. ಬೇಡಿಕೆದಾರರು ಆಯ್ಕೆಗೊಂಡು ಪರವಾನಿಗೆ ಮೇಲೆ ಪಡೆದುಕೊಂಡ ಮಳಿಗೆಯನ್ನು ಯಾವದೇ ಕಾರಣಕ್ಕೂ ಪಾರ್ಟೀಶನ್ ಮಾಡಕೂಡದು. ಪಾರ್ಟೀಶನ್ ಮಾಡಿರುವದು ಕಂಡು ಬಂದಲ್ಲಿ ಅವರ ಪರವಾನಿಗೆಯನ್ನು ರದ್ದುಗೊಳಿಸಿ, ಮಳಿಗೆಯನ್ನು ತೆರವುಗೊಳಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿರುತ್ತದೆ.

4. ನ್ಯಾಯಾಲಯದಲ್ಲಿ ಸಂಸ್ಥೆಯ ವಿರುದ್ಧ ಪ್ರಕರಣ ದಾಖಲು ಮಾಡಿರುವವರು ಹಾಗೂ ಕಪ್ಪುಪಟ್ಟಿಯಲ್ಲಿ ಸೇರಿಸಲಾದ ಅಭ್ಯರ್ಥಿಗಳು **ಇ-ಟೆಂಡರ್**ನಲ್ಲಿ ಭಾಗವಹಿಸುವಂತಿಲ್ಲ. ಒಂದು ವೇಳೆ **ಇ-ಟೆಂಡರ್** ಅಂತಹ ಅಭ್ಯರ್ಥಿಗಳು ಭಾಗವಹಿಸಿದ್ದಲ್ಲಿ ಅವರ ಬೇಡಿಕೆಯನ್ನು ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.
5. ಬಿಡ್‌ದಾರರು ಮಳಿಗೆಗಳಿಗೆ ತಮ್ಮ ಬಿಡ್‌ನ್ನು ಸಲ್ಲಿಸುವ ಮೊದಲು ಆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರವೇ ಬಿಡ್ ಮೊತ್ತವನ್ನು ದಾಖಲಿಸುವುದು, ಬಿಡ್‌ದಾರರ ಜವಬ್ದಾರಿಯಾಗಿರುತ್ತದೆ. **ಇ-ಟೆಂಡರ್** ಪ್ರಕ್ರಿಯೆ ಮುಗಿದ ನಂತರ ಯಾವುದೇ ಕಾರಣಕ್ಕೂ ಮಳಿಗೆಯ ವ್ಯವಹಾರ/ಸ್ಥಳವನ್ನು ಬದಲಾವಣೆ ಮಾಡಲು ಅವಕಾಶ ಇರುವುದಿಲ್ಲ.
6. ಮೀಸಲಾತಿ ಬಯಸುವ ಬಿಡ್‌ದಾರರು ಮೀಸಲಾತಿಗೆ ಸಂಬಂಧಿಸಿದ ದಾಖಲೆಗಳನ್ನು ಆನ್‌ಲೈನ್ ನಲ್ಲಿ ಅಪಲೋಡ್ ಮಾಡುವುದು.
7. ಬಿಡ್‌ದಾರರು ಒಂದು ಮಳಿಗೆಗೆ ಒಂದಕ್ಕಿಂತ ಹೆಚ್ಚಿನ ಬಿಡ್‌ಗಳನ್ನು ಸಲ್ಲಿಸಲು ಅವಕಾಶ ಇರುವುದಿಲ್ಲ.
8. ತೆರೆದ ಜಾಗೆಗಳಿಗೆ **ಇ-ಟೆಂಡರ್ ನಲ್ಲಿ** ಭಾಗವಹಿಸುವ ಬಿಡ್‌ದಾರರು ಸಂಸ್ಥೆಯು ಸೂಚಿಸಿರುವ/ನಿಗಧಿಪಡಿಸಿರುವ ಸ್ಥಳದಲ್ಲಿಯೇ ತಾತ್ಕಾಲಿಕ ಮಳಿಗೆಯನ್ನು (Kiosk) ಇಟ್ಟುಕೊಂಡು 3 ವರ್ಷದ ಅವಧಿಗೆ ವ್ಯವಹಾರವನ್ನು ನಡೆಸಿ, ಅವಧಿಯು ಮುಗಿದ ಬಳಿಕ ತೆರವುಗೊಳಿಸುವುದು. ತೆರೆದ ಜಾಗೆಗಳಿಗೆ ಅಭ್ಯರ್ಥಿಗಳು ತಾವೇ ಅವಶ್ಯಕವಿರುವ ವಿದ್ಯುತ್ ಸಂಪರ್ಕವನ್ನು ತಮ್ಮ ಹೆಸರಿಗೆ ಪಡೆದು, ಪರವಾನಗಿ ಅವಧಿಯು ಮುಗಿದ ಬಳಿಕ ಸಂಪರ್ಕವನ್ನು ತಮ್ಮ ಖರ್ಚಿನಲ್ಲಿಯೇ ತೆರವುಗೊಳಿಸುವುದು ಹಾಗೂ ತೆರವುಗೊಳಿಸಿದ ನಂತರ ಯಾವುದೇ ವಿದ್ಯುತ್ ಬಿಲ್ ಬಾಕಿ ಇಲ್ಲವೆಂದು ವಿದ್ಯುತ್ ಇಲಾಖೆಯಿಂದ ಬಾಕೀ ರಹಿತ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸುವುದು. ಸದರಿ ಸಂಪರ್ಕವನ್ನು ಪಡೆಯಲು ಸಂಸ್ಥೆಯಿಂದ ಆಕ್ಷೇಪಣಾ ರಹಿತ ಪತ್ರವನ್ನು ನೀಡಲಾಗುವುದು. ಅಥವಾ ಸಂಸ್ಥೆಯ ವತಿಯಿಂದ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿದಲ್ಲಿ, ಸಂಸ್ಥೆಯು ನಿಗಧಿಪಡಿಸುವ ಮಾಸಿಕ ವಿದ್ಯುತ್ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ.

## –:ಸಾಮಾನ್ಯ ಷರತ್ತುಗಳು:–

1) ಒಂದು ವೇಳೆ ಬಿಡ್‌ದಾರರು ಇ-ಪೋರ್ಟಲ್‌ನ ಆರ್ಥಿಕ ಬಿಡ್‌ನಲ್ಲಿ ಮತ್ತು ನಿಗದಿತ ನಮೂನೆಯಲ್ಲಿ ನಮೂದಿಸಿದ ಬಿಡ್ ಮೊತ್ತ ಬೇರೆ ಬೇರೆ ಆಗಿದಲ್ಲಿ ಇ-ಪೋರ್ಟಲ್‌ನ ಆರ್ಥಿಕ ಬಿಡ್ ಮೊತ್ತವನ್ನು ಪರಿಗಣಿಸಲಾಗುವುದು.
2) ಬಸ್ ನಿಲ್ದಾಣಗಳ ನವೀಕರಣ ಕಾಮಗಾರಿ/ಆವರಣವನ್ನು ಮೇಲ್ದರ್ಜೆಗೇರಿಸುವ/ದುರಸ್ತಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ ಸಮಯದಲ್ಲಿ, ಸಂಸ್ಥೆಯು ಪರವಾನಗಿದಾರರಿಗೆ ಒಂದು ತಿಂಗಳ ಮುಂಗಡ ನೋಟಿಸ್ ಜಾರಿ ಮಾಡಿ ಪರವಾನಗಿಯನ್ನು ರದ್ದುಪಡಿಸಲಾಗುವುದು. ಇದಕ್ಕೆ ಪರವಾನಗಿದಾರರು ಬದ್ಧರಾಗಿರತಕ್ಕದ್ದು.
3) ನವೀಕರಣ ಕಾಮಗಾರಿ ಪೂರ್ಣಗೊಂಡ ನಂತರ ಮಳಿಗೆಗಳ ವಿಸ್ತೀರ್ಣದಲ್ಲಿ ಬದಲಾವಣೆಗಳಾದಲ್ಲಿ, ವಿಸ್ತೀರ್ಣಕ್ಕೆ ಅನುಗುಣವಾಗಿ ಮಾಸಿಕ ಪರವಾನಗಿ ಶುಲ್ಕವನ್ನು ಮರು ನಿಗದಿಪಡಿಸುವುದು.
4) ಬಿಡ್‌ದಾರರು ಷರತ್ತಿನ ಟೆಂಡರಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಯಾವುದೇ ಷರತ್ತುಗಳು ಇಲ್ಲದೆ **ಇ-ಟೆಂಡರ್**ನಿಯಮಗಳನ್ನು ಪಾಲಿಸುವ ಅರ್ಹ ಟೆಂಡರಗಳನ್ನು ಮಾತ್ರ ಅಂಗೀಕರಿಸಲಾವುದು.
5) ಪರವಾನಿಗೆದಾರರು ತಮ್ಮ ವ್ಯವಹಾರಕ್ಕೆ ಸಂಬಂಧಿಸಿದ ಜಿ.ಎಸ್.ಟಿ, ಆದಾಯ ತೆರಿಗೆ, ಭವಿಶ್ಯನಿಧಿ, ಇ.ಎಸ್.ಐ, ಸೇಲ್ಸ್ ಟ್ಯಾಕ್ಸ್ ಕ್ಲೀಯರನ್ಸ್ ಪ್ರಮಾಣ ಪತ್ರ, ಟ್ರೇಡ್ ಲೈಸನ್ಸ್, ಲೇಬರ್ ಲೈಸನ್ಸ್, ಫುಡ್ ಲೈಸನ್ಸ್ ಇತ್ಯಾದಿ ಪ್ರಮಾಣ ಪತ್ರಗಳನ್ನು ಹೊಂದಿರಬೇಕು.
6) ಆಯ್ಕೆಗೊಂಡ ಪರವಾನಿಗೆದಾರರು ಕಾರ್ಮಿಕರ ಭವಿಷ್ಯನಿಧಿ ಸಂಘಟನೆರವರಲ್ಲಿ ನೋಂದಣೆ ಮಾಡಿಸಿಕೊಂಡಿರಬೇಕು, ಸಂಸ್ಥೆಯ ವಾಣಿಜ್ಯ ಮಳಿಗೆಗಳಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರು ಸಿಬ್ಬಂದಿಗಳಿಗೆ ಪ್ರತಿ ತಿಂಗಳ ಮಾಸಿಕ ಭವಿಷ್ಯ ನಿಧಿ ವಂತಿಕೆಯನ್ನು ಆರ್.ಪಿ.ಎಫ್.ಸಿ ರವರಿಗೆ ಜಮಾ ಮಾಡಬೇಕಾಗಿರುತ್ತದೆ, ಈ ಕುರಿತು ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.
7) ಆಯ್ಕೆಗೊಂಡ ಪರವಾನಿಗೆದಾರರು ಸಂಸ್ಥೆಯ ವಾಣಿಜ್ಯ ಮಳಿಗೆಗಳಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರಿಗೆ/ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಪಿಎಫ್/ಇಎಸ್ಐ ಸೌಲಭ್ಯ ವಿಸ್ತರಿಸಿರುವ ಬಗ್ಗೆ ಅಗತ್ಯ ದಾಖಲಾತಿ ಒದಗಿಸುವುದು, ಸಂಬಂಧಿಸದಿದ್ದಲ್ಲಿ, ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.
8) **ನಿಗಧಿತ ದರದಲ್ಲ ಮಾರಾಟ (MRP RATE)** : ವಾಣಿಜ್ಯ ಮಳಿಗೆಗಳಲ್ಲಿ ಪರವಾನಿಗೆದಾರರು ಮಾರಾಟ ಮಾಡುವ ವಸ್ತುಗಳನ್ನು ಅವುಗಳ ಮೇಲೆ ನಮೂದಿಸಲಾದ ಗರಿಷ್ಠ ಮೊತ್ತಕ್ಕೆ/MRP(Maximum Retail Price) ಮೀರದಂತೆ ಮಾರಾಟ ಮಾಡಬೇಕು. ವಸ್ತುಗಳನ್ನು ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿರುವುದು ಸಂಸ್ಥೆಯ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲ ಪ್ರಕರಣಕ್ಕೆ ರೂ.500/–, 2ನೇ ಪ್ರಕರಣಕ್ಕೆ ರೂ.1000/– ಮತ್ತು 3ನೇ ಪ್ರಕರಣಕ್ಕೆ ರೂ.2000/– ದಂಡ ವಿಧಿಸುವುದು. ಆದಗ್ಯೂ ಇದೇ ರೀತಿಯಾಗಿ ಪುನರಾವರ್ತನೆಗೊಂಡಲ್ಲಿ, ರೂ.2000/– ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ಸಂಸ್ಥೆಯ ಹೊಂದಿರುತ್ತದೆ.
9) ವಾಣಿಜ್ಯ ಮಳಿಗೆಗಳಲ್ಲಿ ನಿಗದಿತ ವಸ್ತು/ವ್ಯವಹಾರ ಹೊರತುಪಡಿಸಿ ಪೂರ್ವಾನುಮತಿ ಪಡೆಯದೇ ಇತರೆ/ಅನಧೀಕೃತ ವ್ಯವಹಾರ ಮಾಡಿದಲ್ಲಿ ಮೊದಲ ಪ್ರಕರಣಕ್ಕೆ ರೂ.1000/–, 2ನೇ ಪ್ರಕರಣಕ್ಕೆ ರೂ.2000/– ಮತ್ತು 3ನೇ ಪ್ರಕರಣಕ್ಕೆ

ರೂ.5000/- ದಂಡ ವಿಧಿಸಲಾಗುವುದು ಕರಾರನ್ನು ರದ್ದುಪಡಿಸುವ ನಿಯಮವನ್ನು ಉಪಹಾರ ಗೃಹ/ಲಾಡ್ಜ್ ಮತ್ತು ಇತರೆ ಎಲ್ಲಾ ಮಳಿಗೆಗಳಿಗೆ ಅನ್ವಯಿಸುತ್ತದೆ.

10) ಮಳಿಗೆಯಲ್ಲಿ ಔಷಧಿ ವ್ಯಾಪಾರ ಮಾಡಬೇಕಾಗಿದ್ದಲ್ಲಿ ಫಾರ್ಮಸಿ ಪದವಿಯನ್ನು ಹೊಂದಿರಬೇಕು.

11) ಸ್ಥಳೀಯ ಇಲಾಖೆ/ಪ್ರಾಧಿಕಾರಗಳು ವಿಧಿಸುವ ತೆರಿಗೆಯನ್ನು ಪರವಾನಿಗೆದಾರರೇ ಸಂಬಂಧಿಸಿದ ಇಲಾಖೆ/ಪ್ರಾಧಿಕಾರಗಳಿಗೆ ಸಂದಾಯ ಮಾಡುವುದು. **ಈ ಸಂಬಂಧ ಕಾನೂನು ತೊಡಕುಗಳು ಬಂದಲ್ಲಿ ಪರವಾನಗಿದಾರರೆ ಜವಾಬ್ದಾರರಾಗಿರುತ್ತಾರೆ.**

12) ಆಯ್ಕೆಗೊಂಡ ಪರವಾನಿಗೆದಾರರು ಸಂಸ್ಥೆಯ ವಾಣಿಜ್ಯ ಮಳಿಗೆಗಳಲ್ಲಿ ಅಗ್ನಿ ರಕ್ಷಕ/ಶಾಮಕ ಉಪಕರಣಗಳನ್ನು ಕಡ್ಡಾಯವಾಗಿ ಅಳವಡಿಸುವುದು ಅಗ್ನಿ ಅವಘಡ ಹಾಗೂ ಇತರೆ ನೈಸರ್ಗಿಕ ದುರಂತಗಳಿಗೆ ಸಂಸ್ಥೆಯು ಜವಾಬ್ದಾರಿಯಾಗಿರುವುದಿಲ್ಲ.

13) ಲಾಡ್ಜಿಂಗ್ & ಡಾರ್ಮಿಟರಿ, ಉಪಹಾರ ಗೃಹ, ಬೇಕರಿ ಮಳಿಗೆಗಳು, ಚಾಟ್ಸ್ ಸೆಂಟರ್ ಇವುಗಳನ್ನು ಹೊರತುಪಡಿಸಿ ಇತರೆ ಮಳಿಗೆಗಳಲ್ಲಿ ಎಲ್ಲಾ ಮಾದರಿಯ ಸ್ಟೌವ್/ ಗ್ಯಾಸ್ ಬಳಿಕೆಯನ್ನು ನಿಷೇಧಿಸಲಾಗಿದೆ.

14) ಬಸ್ ನಿಲ್ದಾಣಗಳಲ್ಲಿ ಚಾಲ್ತಿಯಲ್ಲಿರುವ ವಾಣಿಜ್ಯ ಮಳಿಗೆಗಳ ಪರವಾನಿಗೆದಾರರುಪರವಾನಿಗೆ ಅವಧಿಯಲ್ಲಿ ಆಕಸ್ಮಿತ ಮೃತಪಟ್ಟಲ್ಲಿ ಅವರ ಅವಲಂಬಿತರಿಗೆ (**ಹೆಂಡತಿ/ಗಂಡ/ಮಗಳು/ಮಗ/ಸೊಸೆ/ಅವಲಂಬಿತ/ವಿಧವೆಯ ಮಗಳು**) ಪರವಾನಿಗೆ ಉಳಿಕೆ ಅವಧಿಯವರೆಗೆ ನೀತಿ ನಿಬಂಧನೆಗೊಳಪಟ್ಟು ಮುಂದುವರೆಸಿಕೊಂಡು ಹೋಗಲು ಕೇಂದ್ರ ಕಚೇರಿ ವಾಣಿಜ್ಯ ಇಲಾಖೆಯ ಮುಖ್ಯಸ್ಥರ ಅನುಮೋದನೆ ಪಡೆಯಬೇಕಾಗಿರುತ್ತದೆ.

15) **ಯಾವುದೇ ಸಮಯದಲ್ಲಿ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಕರಾರಿನಲ್ಲಿ ಸೇರಿಸಲು ಮತ್ತು ಮಾರ್ಪಾಡಿಸಲು ಸಂಸ್ಥೆಯು ಅಧಿಕಾರ ಹೊಂದಿರುತ್ತದೆ.**

16) ಬಸ್ ನಿಲ್ದಾಣಗಳಲ್ಲಿ ಹಾಲಿನ ಮಳಿಗೆಗಳ ಜೊತೆಗೆ ಹೆಚ್ಚುವರಿ ಮಳಿಗೆಗಳು/ತೆರೆದ ಸ್ಥಳಗಳಲ್ಲಿ ಹೆಚ್ಚಿನ ಮಳಿಗೆಗಳನ್ನು ಪರವಾನಿಗೆ ಮೇಲೆ ನೀಡಲು ಸಂಸ್ಥೆ ಅಧಿಕಾರ ಹೊಂದಿದ್ದು ಈ ಕುರಿತಂತೆ ಪರವಾನಿಗೆದಾರರು ಆಕ್ಷೇಪ ವ್ಯಕ್ತಪಡಿಸುವಂತಿಲ್ಲ.

17) ಯಾವುದೇ ಕಾರಣ ನೀಡದೆ ಟೆಂಡರನ್ನು ಪುರಸ್ಕರಿಸುವ / ತಿರಸ್ಕರಿಸುವ ಅಧಿಕಾರವನ್ನು ಸಂಸ್ಥೆಯು ಹೊಂದಿರುತ್ತದೆ.

18) ಸಂಸ್ಥೆಯ ವ್ಯವಹಾರಕ್ಕೆ ವ್ಯತಿರಿಕ್ತ ಪರಿಣಾಮ ಉಂಟು ಮಾಡುವ ವ್ಯವಹಾರವನ್ನು ಸಂಸ್ಥೆಯ ವತಿಯಿಂದ ನಿಷೇದಿಸಲಾಗಿದೆ. ಮುಂದೆ ನಿಷೇದಿಸಲ್ಪಡುವ ವಸ್ತುಗಳು ಹಾಗೂ ಕಾನೂನು ಬಾಹೀರ ವಸ್ತುಗಳಿಗೆ ಮಳಿಗೆಗಳಲ್ಲಿ ನಿಷೇದಿಸಲಾಗಿದೆ. ಈ ರೀತಿ ವಸ್ತುಗಳು ಮಾರಾಟ ಕಂಡುಬಂದಲ್ಲಿ ಪರವಾನಿಗೆಯನ್ನು ರದ್ದುಪಡಿಸಲಾಗುವುದು ಹಾಗೂ ಕಾನೂನು ಕ್ರಮ ಕೈಗೊಳ್ಳಲಾಗುವುದು.

19) ವಿಭಾಗೀಯ ಕಛೇರಿ/ಸಂಬಂಧಪಟ್ಟ ಘಟಕದ ಅಕೌಂಟ ಸಂಖ್ಯೆ/ಐ.ಎಫ್.ಸಿ. ಕೋಡನ್ನು ಒದಗಿಸಲಾಗುವುದು. ಪರವಾನಿದಾರರು ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ. ಮೂಲಕ ಪಾವತಿ ಮಾಡುವಾಗ ಬಸ್ ನಿಲ್ದಾಣ, ಮಳಿಗೆ ಸಂಖ್ಯೆ, ಪರವಾನಿಗೆದಾರರ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

20) ಬಾಲ ಕಾರ್ಮಿಕರನ್ನು ನಿಯೋಜಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಅಲ್ಲದೇ ಮಳಿಗೆಯನ್ನು ಯಥಾಸ್ಥಿತಿಯಲ್ಲಿ ನೀಡಲಾಗುವುದು. ಯಾವುದೇ ಮಾರ್ಪಾಡಿಗೆ ಅವಕಾಶವಿರುವುದಿಲ್ಲ.

21) ಕಾಲಕಾಲಕ್ಕೆ ಕೇಂದ್ರ ಸರ್ಕಾರದಿಂದ, ರಾಜ್ಯ ಸರ್ಕಾರದಿಂದ, ಸಂಸ್ಥೆಯಿಂದ ಹಾಗೂ ಸ್ಥಳಿಯ ಪ್ರಾಧಿಕಾರಗಳಿಂದ ಹೊರಡಿಸುವ ಆದೇಶಗಳನ್ನು ಪಾಲಿಸಲು ಪರವಾನಿಗೆದಾರರು ಬದ್ದರಾಗಿರತಕ್ಕದ್ದು.

22) ವಾಣಿಜ್ಯ ಮಳಿಗೆಗಳ ಕರಾರು ಒಪ್ಪಂದದ ಮಧ್ಯದಲ್ಲಿ ಸಂಸ್ಥೆಯ ನೀತಿ-ನಿಬಂಧನೆಗಳಲ್ಲಿ ಬದಲಾವಣೆಗಳಾದಲ್ಲಿ ಸದರಿ ನೀತಿ-ನಿಬಂಧನೆಗಳಿಗೆ ಭದ್ದರಾಗಿರಬೇಕು.

23) ಪರವಾನಗಿದಾರರು ಮತ್ತು ಸಂಸ್ಥೆಯ ಮಧ್ಯ ಯಾವುದೇ ವ್ಯಾಜ್ಯ/ತಕರಾರು ಉಂಟಾದಲ್ಲಿ. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಮಧ್ಯಸ್ತಿಕೆದಾರರಾಗಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರರವರ ತೀರ್ಮಾನವೇ ಅಂತಿಮವಾಗಿರುತ್ತದೆ.

**ಹೆಚ್ಚಿನಮಾಹಿತಿಗಾಗಿ ವೆಬ್‌ಸೈಟ್ (http://www.eproc.karnataka.gov.in) ಹಾಗೂ ಹೆಲ್ಪ್‌ಡೆಸ್ಕ್ ಸಂ: 080-25201227, 080-25501216 ಮತ್ತು 080-23010900/901 ನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ. ಇ-ಟೆಂಡರ್‌ಸ್ವೀಕರಿಸುವ, ತಿರಸ್ಕರಿಸುವ, ಮುಂದೂಡುವ, ರದ್ದುಪಡಿಸುವ, ಮಾರ್ಪಾಟು ಮಾಡುವ ಅಥವಾ ಯಾವುದೇ ಮುನ್ಸೂಚನೆ ಇಲ್ಲದೆ ಇ-ಟೆಂಡರ್ ಭಾಗವಹಿಸಿದ/ಅರ್ಜಿ ಸಲ್ಲಿಸಿದ ಬಿಡ್ಡುದಾರರನ್ನು ಆಯ್ಕೆ & ತಿರಸ್ಕರಿಸುವ ಹಾಗೂ ಯಾವುದೇ ಸಮಯದಲ್ಲಿ ಪ್ರಕಟಣೆಯನ್ನು ರದ್ದುಪಡಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.**

Last date for submitting application: **As per e-procurement portal.**
Tender will be opened on: **As per e-procurement portal.**

**-ಸಹಿ-**
**ವಿಭಾಗೀಯ ನಿಯಂತ್ರಣಾಧಿಕಾರಿ,**
ಕಕರಸಾ ನಿಗಮ ಕೊಪ್ಪಳ ವಿಭಾಗ : ಕೊಪ್ಪಳ

**ಪ್ರತಿಯನ್ನು:** 1) **ಗೌರವಪೂರ್ವಕ ವಂದನೆಗಳೊಂದಿಗೆ,** ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರಾರಸಾ ನಿಗಮ / ಕಕರಸಾ ನಿಗಮ/ವಾಕರಸಾ ಸಂಸ್ಥೆ, ಕೇಂದ್ರ ಕಚೇರಿ, ಬೆಂಗಳೂರು, ಕಲಬುರಗಿ ಹಾಗೂ ಹುಬ್ಬಳ್ಳಿ ರವರುಗಳ ಮಾಹಿತಿಗಾಗಿ ಸಲ್ಲಿಸಲಾಗಿದೆ.

2) **ಗೌರವಪೂರ್ವಕ ವಂದನೆಗಳೊಂದಿಗೆ,** ಮುಖ್ಯ ಸಂಚಾರ ವ್ಯವಸ್ಥಾಪಕರು, ಕರಾರಸಾ ನಿಗಮ, ಕಕರಸಾ ನಿಗಮ ವಾಕರಸಾ ಸಂಸ್ಥೆ, ಕೇಂದ್ರ ಕಚೇರಿ, ಬೆಂಗಳೂರು, ಕಲಬುರಗಿ ಹಾಗೂ ಹುಬ್ಬಳ್ಳಿ ರವರುಗಳ ಮಾಹಿತಿಗಾಗಿ ಸಲ್ಲಿಸಲಾಗಿದೆ.

3) **ವಂದನೆಗಳೊಂದಿಗೆ,** ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ/ ಕಕರಸಾ ನಿಗಮ/ ವಾಕರಸಾ ಸಂಸ್ಥೆ ರವರುಗಳ ಮಾಹಿತಿಗೆ ಹಾಗೂ ಹೆಚ್ಚಿನ ಪ್ರತಿಗಳನ್ನು ಪ್ರಮುಖ ನಿಲ್ದಾಣಗಳಲ್ಲಿನ ಸೂಚನಾ ಫಲಕಗಳ ಮೇಲೆ ಆಸಕ್ತರ ಮಾಹಿತಿಗಾಗಿ ಪ್ರಕಟಿಸಲು ಕೋರಲಾಗಿದೆ.

**–ಸಹಿ–**

**ವಿಭಾಗೀಯ ನಿಯಂತ್ರಣಾಧಿಕಾರಿ,**

ಕಕರಸಾನಿಗಮ : ಕೊಪ್ಪಳ ವಿಭಾಗ : ಕೊಪ್ಪಳ

ಗೆ, ದಿನಾಂಕ:

ವಿಭಾಗೀಯ ನಿಯಂತ್ರಣಾಧಿಕಾರಿಗಳು,
ಕ.ಕ.ರ.ಸಾ. ನಿಗಮ, ಕೊಪ್ಪಳ ವಿಭಾಗ,
ಕೊಪ್ಪಳ

ಮಾನ್ಯರೆ,

ವಿಷಯ: **ಕಪ್ಪು ಪಟ್ಟಿಗೆ** ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ.
ಉಲ್ಲೇಖ: ಇ–ಟೆಂಡರ್‌ಪ್ರಕಟಣೆ ಸಂ:01/2022 ದಿನಾಂಕ:11.03.2022

0*~*~*0

ಈ ಕೆಳಗೆ ಸಹಿ ಮಾಡಿದ ನಾನು ______________________ಸಾ:_____________

ನಿವಾಸಿಯಾಗಿದ್ದು, ಕೊಪ್ಪಳ ವಿಭಾಗದ ವ್ಯಾಪ್ತಿಯಲ್ಲಿರುವ______________ ಬಸ್ ನಿಲ್ದಾಣದಲ್ಲಿನ

______________________ನ್ನು ಪರವಾನಗಿ ಮೇಲೆ ನೀಡಲು ಕರೆದಿರುವ ಇ–ಟೆಂಡರ್‌ಪ್ರಕಟಣೆ ಸಂ: 01/2022 ದಿನಾಂಕ:11.03.2022 ಗೆ ಇಪ್ರೋಕ್ಯೂರ್‌ಮೇಂಟ್ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುತ್ತೇನೆ.

ಈ ಸಂಬಂಧ ನಾನು ಕ.ರಾ.ರ.ಸಾ.ನಿಗಮ/ಕ.ಕ.ರ.ಸಾ.ಸಂಸ್ಥೆ/ವಾ.ಕ.ರ.ಸಾ.ಸಂಸ್ಥೆ/ಬೆಂ.ಮ.ಸಾ.ಸಂಸ್ಥೆ ಮತ್ತು ಇತರೆ ಸರ್ಕಾರಿ ಇಲಾಖೆಗಳಲ್ಲಿ ಯಾವುದೇ ವಾಣಿಜ್ಯ ಮಳಿಗೆಗಳಿಗಾಗಲಿ, ತೆರೆದ ಜಾಗೆಗಳಿಗಾಗಲಿ, ಜಾಹೀರಾತು ಪ್ರದರ್ಶಿಸುವ ವಿಷಯಕ್ಕಾಗಲಿ ಅಥವಾ ,ಸ್ವಚ್ಚತಾ ಗುತ್ತಿಗೆಗೆ ಸಂಬಂಧಿಸಿದ ವಿಷಯಕ್ಕಾಗಿ ನಾನು **ಕಪ್ಪು ಪಟ್ಟಿಗೆ** ಸೇರಿಲ್ಲವೆಂದು ಈ ಮೂಲಕ ಸ್ವಯಂ ದೃಢೀಕರಿಸುತ್ತೇನೆ.

ಆದ್ದರಿಂದ, ನಾನು ಒದಗಿಸಿರುವ ಮಾಹಿತಿಯು ಸತ್ಯವೆಂದು ದೃಢೀಕರಿಸುತ್ತ, ಈ ಬಗ್ಗೆ ಸಂಸ್ಥೆಗೆ ಯಾವುದೇ ಹಂತದಲ್ಲಿ ನಾನು ಸಲ್ಲಿಸಿರುವ ಮಾಹಿತಿ ತಪ್ಪು ಎಂದು ಕಂಡು ಬಂದಲ್ಲಿ, ನಾನು ಸಲ್ಲಿಸಿರುವ ಇ.ಎಂ.ಡಿ/ ಭದ್ರತಾ ಠೇವಣಿಯ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದರೊಂದಿಗೆ ನನ್ನ ಆಯ್ಕೆ / ಕರಾರು ಒಪ್ಪಂದವನ್ನು ರದ್ದುಗೊಳಿಸುವ ನಿಯಮದ ಬಗ್ಗೆ ತಿಳಿದುಕೊಂಡೇ ಅರ್ಜಿ ಸಲ್ಲಿಸಿರುತ್ತೇನೆ. ಅಲ್ಲದೇ ಈ ಬಗ್ಗೆ ನಾನು ಯಾವುದೇ ತಪ್ಪು ಮಾಹಿತಿ ನೀಡಿರುವುದು ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ / ಅಸತ್ಯವೆಂದು ದೃಡಪಟ್ಟಲ್ಲಿ ಸಂಸ್ಥೆಯು ತೆಗೆದುಕೊಳ್ಳುವ ನಿರ್ಧಾರ / ಕ್ರಮಗಳಿಗೆ ನಾನು ಬದ್ಧನಾಗಿರುತ್ತೇನೆಂದು ಈ ಮೂಲಕ ಸ್ವಯಂ ದೃಢೀಕರಿಸುತ್ತೇನೆ.

ವಂದನೆಗಳೊಂದಿಗೆ, ತಮ್ಮ ವಿಶ್ವಾಸಿ,

ಸಹಿ:
ಹೆಸರು:
ವಿಳಾಸ:
ದೂ:

ಗೆ, ದಿನಾಂಕ:

ವಿಭಾಗೀಯ ನಿಯಂತ್ರಣಾಧಿಕಾರಿಗಳು,
ಕ.ಕ.ರ.ಸಾ.ನಿಗಮ, ಕೊಪ್ಪಳ ವಿಭಾಗ,
ಕೊಪ್ಪಳ

ಮಾನ್ಯರೆ,

ವಿಷಯ : **ಇ-ಟೆಂಡರ್ ಪ್ರಕಟಣೆಯ** ಸಂಸ್ಥೆಯ ಷರತ್ತು ಮತ್ತು ನಿಬಂಧನೆಗಳನ್ನು ಓದಿ ಅರ್ಥೈಸಿಕೊಂಡಿರುವ ಕುರಿತು ಸ್ವಯಂ ದೃಢೀಕರಣ ಪತ್ರ.

ಉಲ್ಲೇಖ : ಇ-ಟೆಂಡರ್‌ಪ್ರಕಟಣೆ ಸಂ: 01/2022 ದಿನಾಂಕ:11.03.2022

0*~*~*0

ಈ ಕೆಳಗೆ ಸಹಿ ಮಾಡಿದ ನಾನು _________________________ಸಾ:____________

ನಿವಾಸಿಯಾಗಿದ್ದು, ಕೊಪ್ಪಳ ವಿಭಾಗದ ವ್ಯಾಪ್ತಿಯಲ್ಲಿರುವ_______________ ಬಸ್ ನಿಲ್ದಾಣದಲ್ಲಿನ

____________________________ನ್ನು ಪರವಾನಗಿ ಮೇಲೆ ನೀಡಲು ಕರೆದಿರುವ ಇ-ಟೆಂಡರ್‌ಪ್ರಕಟಣೆ ಸಂ:01/2022 ದಿನಾಂಕ:11.03.2022 ಗೆ ಇಪ್ರೋಕ್ಯೂರ್‌ಮೆಂಟ್ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಿರುತ್ತೇನೆ.

ಈ ಸಂಬಂಧ ಸಂಸ್ಥೆಯು ಕರೆದಿರುವ ಇ-ಟೆಂಡರ್‌ಪ್ರಕಟಣೆಯನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಂಡಿರುತ್ತೇನೆ. ಅಲ್ಲದೇ ಸಂಸ್ಥೆಯ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುತ್ತೇನೆ ಮತ್ತು ನಾನು ಪರವಾನಗಿದಾರರನಾಗಿ ಆಯ್ಕೆಯಾಗಿದ್ದಲ್ಲಿ **ಸಂಸ್ಥೆಯು ಕಾಲಕಾಲಕ್ಕೆ ಅಥವಾ ಯಾವುದೇ ಸಮಯದಲ್ಲಿ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಕರಾರಿನಲ್ಲಿ ಸೇರಿಸಲು/ಮಾರ್ಪಡಿಸಲು ಅಧಿಕಾರ ಹೊಂದಿದ್ದು, ಸಂಸ್ಥೆಯು ಮಾರ್ಪಾಡು ಮಾಡುವ ಷರತ್ತು/ನಿಬಂಧನೆಗಳಿಗೆ ನಾನು ಬದ್ದನಾಗಿರುತ್ತೇನೆ** ಎಂದು ಯಾರ ಒತ್ತಡವಿಲ್ಲದೇ ನನ್ನ ಸ್ವ-ಇಚ್ಛೆಯಿಂದ ಒಪ್ಪಿಕೊಂಡು ದೃಢೀಕರಿಸಿರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಸಹಿ:
ಹೆಸರು:
ವಿಳಾಸ:
ದೂ:

ಗೆ, ದಿನಾಂಕ:

ವಿಭಾಗೀಯ ನಿಯಂತ್ರಣಾಧಿಕಾರಿಗಳು,
ಕ.ಕ.ರ.ಸಾ. ಸಂಸ್ಥೆ, ಕೊಪ್ಪಳ ವಿಭಾಗ,
ಕೊಪ್ಪಳ

ಮಾನ್ಯರೆ,

ವಿಷಯ: **ಸ್ವಯಂ** ದೃಢೀಕರಣ ಪತ್ರ.

ಉಲ್ಲೇಖ :ಇ–ಟೆಂಡರ್‌ಪ್ರಕಟಣೆ ಸಂ: 01/2022 ದಿನಾಂಕ:11.03.2022

0*~*~*0

ಈ ಕೆಳಗೆ ಸಹಿ ಮಾಡಿದ ನಾನು ________________________ಸಾ:____________

ನಿವಾಸಿಯಾಗಿದ್ದು, ಕೊಪ್ಪಳ ವಿಭಾಗದ ವ್ಯಾಪ್ತಿಯಲ್ಲಿರುವ_______________ ಬಸ್ ನಿಲ್ದಾಣದಲ್ಲಿನ

___________________________ನ್ನು ಪರವಾನಗಿ ಮೇಲೆ ನೀಡಲು ಕರೆದಿರುವ ಇ–ಟೆಂಡರ್‌ಪ್ರಕಟಣೆ ಸಂ: 01/2022 ದಿನಾಂಕ:11.03.2022 ಗೆ ಇಪ್ರೋಕ್ಯೂರ್‌ಮೇಂಟ್ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಿರುತ್ತೇನೆ.

ಈ ಸಂಬಂಧ ನಾನು ಕ.ರಾ.ರ.ಸಾ.ನಿಗಮ/ಕ.ಕ.ರ.ಸಾ.ಸಂಸ್ಥೆ/ವಾ.ಕ.ರ.ಸಾ.ಸಂಸ್ಥೆ/ಬೆಂ.ಮ.ಸಾ.ಸಂಸ್ಥೆ ಮತ್ತು ಇತರೆ ಸರ್ಕಾರಿ ಇಲಾಖೆಗಳಲ್ಲಿ ಹಾಗೂ ಕಾರ್ಮಿಕ ನಿರಿಕ್ಷಕರು ಕನಿಷ್ಠ ವೇತನ ಪಾವತಿ, ಪಿಎಫ್, ಇಎಸ್‌ಐ ಪಾವತಿಗೆ ಸಂಬಂಧಪಟ್ಟಂತೆ ಕಾರ್ಮಿಕ ಇಲಾಖೆ/ನ್ಯಾಯಾಲಯದಲ್ಲಿ ಯಾವುದೇ ಪ್ರಕರಣವು ಚಾಲ್ತಿಯಲ್ಲಿರುವುದಿಲ್ಲವೆಂದು ಈ ಮೂಲಕ ಸ್ವಯಂ ದೃಢೀಕರಿಸುತ್ತೇನೆ.

ಆದ್ದರಿಂದ, ನಾನು ಒದಗಿಸಿರುವ ಮಾಹಿತಿಯು ಸತ್ಯವೆಂದು ದೃಢೀಕರಿಸುತ್ತ, ಈ ಬಗ್ಗೆ ಸಂಸ್ಥೆಗೆ ಯಾವುದೇ ಹಂತದಲ್ಲಿ ನಾನು ಸಲ್ಲಿಸಿರುವ ಮಾಹಿತಿ ತಪ್ಪು ಎಂದು ಕಂಡು ಬಂದಲ್ಲಿ, ನಾನು ಸಲ್ಲಿಸಿರುವ ಇ.ಎಂ.ಡಿ/ ಭದ್ರತಾ ಠೇವಣಿಯ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದರೊಂದಿಗೆ ನನ್ನ ಆಯ್ಕೆ/ ಕರಾರು ಒಪ್ಪಂದವನ್ನು ರದ್ದುಗೊಳಿಸುವ ನಿಯಮದ ಬಗ್ಗೆ ತಿಳಿದುಕೊಂಡೇ ಅರ್ಜಿ ಸಲ್ಲಿಸಿರುತ್ತೇನೆ. ಅಲ್ಲದೇ ಈ ಬಗ್ಗೆ ನಾನು ಯಾವುದೇ ತಪ್ಪು ಮಾಹಿತಿ ನೀಡಿರುವುದು ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ/ಅಸತ್ಯವೆಂದು ದೃಡಪಟ್ಟಲ್ಲಿ ಸಂಸ್ಥೆಯು ತೆಗೆದುಕೊಳ್ಳುವ ನಿರ್ಧಾರ/ಕ್ರಮಗಳಿಗೆ ನಾನು ಬದ್ಧನಾಗಿರುತ್ತೇನೆಂದು ಈ ಮೂಲಕ ಸ್ವಯಂ ದೃಢೀಕರಿಸುತ್ತೇನೆ.

ವಂದನೆಗಳೊಂದಿಗೆ, ತಮ್ಮ ವಿಶ್ವಾಸಿ,

ಸಹಿ:

ಹೆಸರು:

ವಿಳಾಸ:

ದೂ: